# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಭಾನುವಾರ, ಏಪ್ರಿಲ್ 13, 2025

ಸಂಪುಟ : 51 ಸಂಚಿಕೆ : 330 ☎ 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com



ಆರ್. ಹೆಚ್. ರಾಧಾಕೃಷ್ಣ ಗುಪ್ತ ಜ್ಯೂಯಲರ್ಸ್ ಪ್ರೈ. ಲಿ.

RH JEWELLERS The Symbol of Trust

ವಜ್ರ - ಪ್ಲಾಟಿನಂ - ಬಂಗಾರ - ಬೆಳ್ಳಿ

ಈ ಅಕ್ಷಯ ತೃತೀಯದಂದು

ಚಿನ್ನದ ಆಭರಣಗಳನ್ನು ಖರೀದಿಸಿ ಮತ್ತು

ಅಷ್ಟೋತ್ತರದ ಬೆಳ್ಳಿಯನ್ನು ಉಚಿತವಾಗಿ ಪಡೆಯಿರಿ

ಅಕ್ಷಯ ತೃತೀಯ-2025

ಮುಂಗಡ ಬುಕ್ಕಿಂಗ್ ಆರಂಭವಾಗಿದೆ

ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ-577 001 8550833300 www.rhrjewellers.com


## ಒಬಿಸಿ ಮೀಸಲಾತಿ ಹೆಚ್ಚಿಸಲು ಶಿಫಾರಸ್ಸು

ಬೆಂಗಳೂರು, ಏ. 12 – ರಾಜ್ಯದಲ್ಲಿ ಮುಸ್ಲಿಂ, ಲಿಂಗಾಯತ, ಒಕ್ಕಲಿಗರ ಮೀಸಲಾತಿ ಹೆಚ್ಚಳ ಮಾಡುವಂತೆ ಕೆ. ಜಯಪ್ರಕಾಶ್ ಹೆಗ್ಡೆ ಆಯೋಗ ಶಿಫಾರಸು ಮಾಡಿದೆ. ಸರ್ಕಾರ ಇದರಂತೆ ಕ್ರಮ ತೆಗೆದು ಕೊಂಡಲ್ಲಿ, ಮೀಸಲು ಪ್ರಮಾಣ ಶೇ. 75.1 ಆಗಲಿದೆ.

ಪ್ರಸಕ್ತ ಹಿಂದುಳಿದವರ ಮೀಸಲಾತಿ ಪ್ರಮಾಣ ಶೇ 32ರಷ್ಟಿದೆ. ಇದನ್ನು ಶೇ 51ಕ್ಕೆ ಏರಿಕೆ ಮಾಡುವಂತೆ ಕೆ. ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಇದರಂತೆ ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು, ಹಿಂದುಳಿದ ತಳ ಸಮುದಾಯಗಳೂ ಸೇರಿ ಇತರೆ ಹಿಂದುಳಿದ ಜಾತಿಗಳ (ಒಬಿಸಿ) ಪಟ್ಟಿ ಯಲ್ಲಿರುವ ವಿವಿಧ ಜಾತಿಗಳ ಮೀಸಲಾತಿಯನ್ನು ಮರು ವರ್ಗೀಕರಣ ಮಾಡಿ, ಆಯಾ ಜಾತಿ ಯವರ ಜನಸಂಖ್ಯೆಗೆ ಅನುಗುಣ ವಾಗಿ ಈಗಿರುವ ಮೀಸಲು ಪ್ರಮಾಣವನ್ನು ಹೆಚ್ಚಳ ಮಾಡಬೇಕು ಎಂದು ಆಯೋಗ ವಿವರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ಯಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಯೋ ಗವು 2024ರ ಫೆಬ್ರವರಿಯಲ್ಲಿ ಸಲ್ಲಿಸಿದ್ದ ಶಿಫಾರಸು ಹಾಗೂ ಮುಖ್ಯಾಂಶಗಳ ಮಂಡನೆಯಾಗಿದೆ. ಇತರೆ ಹಿಂದುಳಿದವರು (ಒಬಿಸಿ) ಜನಸಂಖ್ಯೆಗೆ ಅನುಗುಣವಾಗಿ ಹಿಂದು ಳಿದವರ ಮೀಸಲಾತಿ ಪ್ರಮಾಣವನ್ನು ಈಗ ಇರುವ ಶೇ 32ರಿಂದ ಶೇ 51ಕ್ಕೆ ಏರಿಕೆ ಮಾಡುವಂತೆ ಶಿಫಾರಸ್ಸು ಮಾಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಟ್ಟು ಜನಸಂಖ್ಯೆ 1.6 ಕೋಟಿಗೂ ಅಧಿಕವಾಗಿದೆ. ಪರಿಶಿಷ್ಟ ಜಾತಿಗೆ 17.15%, ಪರಿಶಿಷ್ಟ ಪಂಗ ಡಕ್ಕೆ 6.95% ಮೀಸಲಾತಿ ಇದ್ದು ಯಥಾ ಸ್ಥಿತಿ ಮುಂದು ವರಿಸುವಂತೆ ಆಯೋಗ ಶಿಫಾರಸ್ಸು ಮಾಡಿದೆ.

ಮುಸ್ಲಿಂ ಸಮುದಾಯದವರ ಸಂಖ್ಯೆ (75.27 ಲಕ್ಷ) ಹೆಚ್ಚಿರುವ ಕಾರಣ ಈ ಸಮುದಾಯದ ಮೀಸ ಲಾತಿ ಪ್ರಮಾಣ (5ನೇ ಪುಟಕ್ಕೆ)

## ಫೇಲ್ ಆದ್ರೂ ಸಿಇಟಿ ಅವಕಾಶ

ಬೆಂಗಳೂರು, ಏ. 12 - ದ್ವಿತೀಯ ಪಿಯುಸಿ ಮೊದಲನೇ ಪರೀಕ್ಷೆಯಲ್ಲಿ ನಿಗದಿತ ಅರ್ಹತೆ ಗಳಿಸದ ಹಾಗೂ ಅನುತ್ತೀರ್ಣರಾಗಿ 2 ಮತ್ತು 3ನೇ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಅಭ್ಯರ್ಥಿಗಳೂ ಸಹಾ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯ ಬಹುದಾಗಿದೆ (5ನೇ ಪುಟಕ್ಕೆ)

## ಎಲೆಕ್ಟ್ರಾನಿಕ್ಸ್ ವಸ್ತುಗಳಿಗೆ ಟ್ರಂಪ್ ಸುಂಕದಿಂದ ವಿನಾಯಿತಿ

ವಾಷಿಂಗ್ಟನ್, ಏ. 12 - ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಸೇರಿದಂತೆ ಹಲವು ಎಲೆಕ್ಟ್ರಾನಿಕ್ಸ್ ವಸ್ತುಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಸುಂಕದಿಂದ ವಿನಾಯಿತಿ ನೀಡಿದೆ. ಇದರಿಂದಾಗಿ ಅಮೆರಿಕದ ಗ್ರಾಹಕರ ಮೇಲಿನ ಆರ್ಥಿಕ ಒತ್ತಡ ಕಡಿಮೆಯಾಗಲಿದೆ.



ಟ್ರಂಪ್ ತೆಗೆದುಕೊಂಡ ಈ ಕ್ರಮವು ಆಪಲ್, ಸ್ಯಾಮ್‌ಸಂಗ್, ಎನ್‌ವಿಡಿಯಾ ಮುಂತಾದ ಕಂಪನಿಗಳಿಗೆ ನೆರವಾಗಲಿದೆ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಹಾರ್ಡ್ ಡ್ರೈವ್, ಫ್ಲ್ಯಾಟ್ ಪ್ಯಾನಲ್ ಮಾನಿಟರ್‌ಗಳು ಹಾಗೂ ಸೆಮಿಕಂಡಕ್ಟರ್ ಉತ್ಪಾ ದನೆಗೆ ಬಳಸುವ ಯಂತ್ರಗಳಿಗೂ (5ನೇ ಪುಟಕ್ಕೆ)


Class 6th to 10th

CBSE / ICSE / IGCSE

Summer Classes

Spoken English

Call : 87319 60339

Maths & Science

Call : 97398 65711



SMT. PUSHPA SHAMANUR MAHALINGAPPA RESIDENTIAL CBSE, ICSE SCHOOL & PU SCIENCE COLLEGE, DAVANGERE

#5335, 1st Main, Road, Near Bapuji Engineering College, Swamy Vivekananda Badavane, Davangere, Karnataka.

REQUIRED TEACHERS

We invite well qualified & experienced teachers for our CBSE & ICSE Schools

WALK IN INTERVIEW

Date : 14-04-2025 & 15-04-2025

Timing : 10am to 4pm

| SCIENCE, MATHS, SOCIAL & ENGLISH | |
|---|---|
| CLASS | SALARY |
| 1st - 4th Std. | Upto 40K |
| 5th - 8th Std. | Upto 50K |
| 9th - 10th Std. | Upto 65K |

LECTURERS FOR PUC & KCET

• PHYSICS • CHEMISTRY • MATHEMATICS • BIOLOGY

Co-ordinators: for Primary, Middle School & High School.

Front Office Manager

→ Physical Education Trainer (Male & Female Candidates)

For Enquiry Call: 9686266990



Bapuji Educational Association (R)

BAPUJI SPSS PU COLLEGE (PSSEMR) - Tolahunse & Dr. SS PRE UNIVERSITY COLLEGE - MBA Ground

DAVANGERE

"MARKS SPEAK LOUDER THAN WORDS ! OUR STUDENTS LET RESULTS DO THE TALKING!"

25% OF SCIENCE STUDENTS HAVE SCORED ABOVE 80%

70% OF SCIENCE STUDENTS HAVE SCORED FIRST CLASS

57% OF COMMERCE STUDENTS HAVE SCORED ABOVE 80%

92% OF COMMERCE STUDENTS HAVE SCORED FIRST CLASS

SURYA NARAYANA R S 570/600 95%

PRIYA A H 553/600 92.17%

BOARD RESULTS

RAJESHWARI V PATEL 550/600 91.67%

NIKITHA P D 549/600 91.50%

CHANDRIKA S 549/600 91.50%

SRIHARI N MAHALE 546/600 91%

PREKSHA K C 545/600 90.83%

GOVIND GOUD 541/600 90.17%

T S SHHAURYA 539/600 89.83%

ROHIT H P 538/600 89.67%

RAGHUNANDAN R 534/600 89%

DEEPIKA L G 533/600 88.33%

FAKRUDIN T DHARWAD 527/600 87.83%

SHREYAS G 527/600 87.83%

OUR PREVIOUS NEET/JEE/ADVANCED/CET RESULTS

SUPRIT S NEET-647/720

VIREN N DESHPANDE NEET-632/720

CHETAN B NEET-583/720

NISHANT P NEET-565/720

ADARSH M P JEE MAINS-220/300 99.689 percentile

JEEVAN B R JEE MAINS- 97.76%

NIKHIL P B JEE MAINS-97.60%

VIREN N DESHPANDE JEE MAINS-97.48

ADARSH M P JEE ADVANCED-AIRank-4803

NIKHIL P B JEE ADVANCED-AIRank-4132

ADARSH M P K-CET - Rank - 703

NIKHIL P B K-CET - Rank - 867

100% SCHOLARSHIP FOR MERITORIOUS STUDENTS

CONTACT OUR ADMISSION OFFICE : +91-8050409976

PSSEMRS Dr.SSNPS



## ಆನಗೋಡಿನಲ್ಲಿ ವಿಜೃಂಭಣೆಯ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಶ್ರೀ ಮರುಳಸಿದ್ದೇಶ್ವರ ರಥೋತ್ಸವವು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶನಿವಾರ ಸಂಜೆ ವಿಜೃಂಭಣೆಯಿಂದ ನೆರವೇರಿತು.

# ಸಿರಿಗೆರೆ ಮಠದ ಭಕ್ತರಿಗೆ ಅದ್ಭುತ ಶಕ್ತಿ : ಶ್ರೀಗಳು

ಮಾಯಕೊಂಡ, ಏ.12- ಸಿರಿಗೆರೆ ಮಠದ ಭಕ್ತರಿಗೆ ಮರುಳಸಿದ್ದರಂತೆ ಕಠಿಣ ಸವಾಲನ್ನು ಎದುರಿಸುವ ಅದ್ಭುತ ಶಕ್ತಿ ಇದೆ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪ್ರತಿಪಾದಿಸಿದರು.

ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ನಡೆದ ಶ್ರೀ ಮರುಳ ಸಿದ್ಧೇಶ್ವರ ಸ್ವಾಮಿ ರಥೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕಷ್ಟ ಕೊಡುವುದು, ದ್ವೇಷಿಸುವುದು ಮನುಷ್ಯನ ಸ್ವಭಾವ. ಮರುಳುಸಿದ್ದರೂ ಹಲವು ಕಷ್ಟ ಅನುಭವಿಸಿದ್ದರು. ಅವರನ್ನು ಆನೆಯಿಂದ ತುಳಿದು ಸಾಯಿಸುವ ಹುನ್ನಾರ ನಡೆದರೂ. ಮರುಳುಸಿದ್ದರು ಅದರ ಕೋಡನ್ನೇ ಮುರಿದರು. ಹಾಗೆಯೇ ಮಠದ ಭಕ್ತರಿಗೆ ಆನೆಯ ಕೊಂಬಿನಂಥ ಕಷ್ಟವನ್ನು ಬಗ್ಗಿಸುವ ಅದ್ಭುತ ಶಕ್ತಿಯಿದೆ. ಮರುಳುಸಿದ್ದರಿಗೆ ರಾಜಾಶ್ರಯ ಇಲ್ಲದಿದ್ದರೂ ಜನಬಲವಿತ್ತು ಎಂದರು.

ಮನುಷ್ಯ ದ್ವೇಷ ಮಾಡುತ್ತಾನೆಯೇ ವಿನಾಃ ಪ್ರಾಣಿಗಳಲ್ಲ. ಮನುಷ್ಯನ ದ್ವೇಷಕ್ಕೆ ಮಿತಿಯಿಲ್ಲ. ಬಸವಣ್ಣನ ವಚನಗಳು ಪ್ರಪಂಚಾದ್ಯಂತ ಹರಡುವ ಹಿರಿಯ ಗುರುಗಳ ಬಹುದೊಡ್ಡ ಆಸೆಯನ್ನು ಈಡೇರಿಸಲು ವಚನಗಳನ್ನು ಆನ್‌ಲೈನ್‌ನಲ್ಲಿ ಅಳವಡಿಸಿದ್ದೇವೆ. ಪುಸ್ತಕ ಓದುವ ಹವ್ಯಾಸವಿಲ್ಲದವರೂ ಮೊಬೈಲ್‌ನಲ್ಲಿ ವಚನ ಸಾಹಿತ್ಯ ಓದಬಹುದು ಎಂದರು.

22 ಕೆರೆ ಏತ ನೀರಾವರಿ ಸಮರ್ಪಕವಾಗಿಲ್ಲದ ಕಾರಣ, ಕೆಲವು ಕಡೆ ತೊಂದರೆಯಾಗಿದೆ. ಯಾವುದೇ ಹಳ್ಳಿಗಳಿಗೆ ಹೋದರೂ ದಾವಣಗೆರೆಗೆ ಬಂದಿದ್ದೇವೆ ಎಂಬ ಭಾವನೆ ಬರುವಂತೆ ಸುಸಜ್ಜಿತ ಮನೆಗಳಿವೆ. ರೈತರ ಬದುಕಿನಲ್ಲಿ ಭರವಸೆ ಬಂದಿದೆ. ರೈತರ ಕಷ್ಟಕ್ಕೆ ಜನಪ್ರತಿನಿಧಿಗಳು ಸ್ಪಂದಿಸಲಿ ಎಂದು ಕರೆ ನೀಡಿದರು.

ಇಲ್ಲಿನ ಪಿಯು ಕಾಲೇಜು ಕಟ್ಟಡ ಹಾಳಾಗಿತ್ತು, ಆರು ಕೋಟಿ ವೆಚ್ಚದಲ್ಲಿ ಕಾಲೇಜು ನಿರ್ಮಿಸಲಾಗುತ್ತಿದೆ. ಹಿರಿಯ ಗುರುಗಳು ವಿದ್ಯೆಗೆ ಬೆಲೆ ಕೊಟ್ಟವರು ಹಾಗಾಗಿ ಕಾಲೇಜು ಕಟ್ಟಿದೆ. ಜನ ಸಂಘಟಿತರಾಗಿ ದೇವಸ್ಥಾನ ನಿರ್ಮಾಣ ಮಾಡಬೇಕು. ಭಕ್ತರು ವೈಯಕ್ತಿಕ ಕಾರ್ಯಕ್ರಮಕ್ಕೆ ಆಹ್ವಾನಿಸದಿದ್ದರೆ ಸಮಾಜದ ಕೆಲಸ ಮಾಡಲು ಅನುಕೂಲವಾಗುತ್ತದೆ. ನಮ್ಮ ಸತತ ಪ್ರಯತ್ನದಿಂದ ಮಠದ ಆಸ್ತಿಪಾಸ್ತಿ ಉಳಿದಿರುವುದು ಮಠಕ್ಕೆ ಹತ್ತಿರದವರಿಗೆ ಗೊತ್ತಿದೆ ಎಂದು ಹೇಳಿದರು.



ಆನಗೋಡಿನ ಶ್ರೀ ಮರುಳಸಿದ್ದೇಶ್ವರ ರಥೋತ್ಸವದ ಸಂದರ್ಭದಲ್ಲಿನ ಸಭಾ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಭಕ್ತರು.

ಸಾಧು ಸದ್ಧರ್ಮ ಸಮಾಜದ ತಾಲ್ಲೂಕು ಅಧ್ಯಕ್ಷ ಎಚ್.ಡಿ. ಮಹೇಶ್ವರಪ್ಪ ರಥೋತ್ಸವಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಿದೆ. ಆನಗೋಡಿನಲ್ಲಿ ನಿರ್ಮಾಣವಾಗುತ್ತಿರುವ ದೇವಾಲಯ ನಿರ್ಮಾಣಕ್ಕೆ ಧನ ಸಹಾಯ ಮಾಡಬೇಕು ಎಂದು ಮನವಿ ಮಾಡಿದರು. ತಾವು ಇಲ್ಲಿಯವರೆಗೆ ಸಂಗ್ರಹಿಸಿದ ಹಣ ದೇವಸ್ಥಾನ ಕಮಿಟಿಗೆ ರೂ. 12,12,120 ಅನ್ನು ನೀಡಿದರು.

ಸಾಧು ಸದ್ಧರ್ಮ ಸಮಾಜದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ ಮಾತನಾಡಿ, ಬಸವಾದಿ ಶರಣರ ಆಶಯದಂತೆ ಮಠ ಕೆಲಸ ಮಾಡುತ್ತಿದೆ. ಶೋಷಿತರ, ದಲಿತರ ಬದುಕು ಹಸನು ಮಾಡಲು ಮರುಳುಸಿದ್ದರು ಶ್ರಮಿಸಿದಂತೆ ಇಂದಿಗೂ ಶ್ರೀಗಳು ಶ್ರಮಿಸುತ್ತಿದ್ದಾರೆ. ಶ್ರೀಗಳು ವಚನಗಳನ್ನು ಕನ್ನಡದಿಂದ ಹಿಂದಿ, ತೆಲುಗು ಮತ್ತು ತಮಿಳಿಗೆ ಅನುವಾದಿಸಿ ಮಹತ್ಕಾರ್ಯ ಮಾಡಿದ್ದಾರೆ. ಕೆರೆ ಏತ ನೀರಾವರಿ ಮಾಡಿ, ಆನ್ ಲೈನ್ ಪರಿಹಾರ ದೊರಕಿಸಿ ರೈತರಿಗೆ ನೆರವಾಗಿದ್ದಾರೆ. ಶ್ರೀಮಠ ಜಾತ್ಯತೀತವಾಗಿ ಎಲ್ಲರಿಗೂ ನೆರವಾಗಿದೆ ಎಂದು ಶ್ಲಾಘಿಸಿದರು.

ಆನಗೋಡು ಸುತ್ತಮುತ್ತಲಿನ ಹಲವು ಹಳ್ಳಿಗಳ ಸಾವಿರಾರು ಭಕ್ತರು ಆಗಮಿಸಿದ್ದರು. ಭಕ್ತರು ಉತ್ಸಾಹದಿಂದ ತೇರು ಎಳೆದು ಸಂಭ್ರಮಿಸಿಸರು.

ಶಾಸಕ ಕೆ.ಎಸ್. ಬಸವಂತಪ್ಪ, ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಸಮಾಜದ ಮುಖಂಡ ಬಸವನಗೌಡ, ಗ್ರಾಮ ಪಂಚಾಯತಿ ಅಧ್ಯಕ್ಷರಾದ, ನಿರ್ಮಲಾ ಸೋಮಶೇಖರಪ್ಪ, ಉಪಾಧ್ಯಕ್ಷ ಕಲ್ಲೇಶ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ರವಿ, ವಸಂತಕುಮಾರ್ ಸದಸ್ಯರಾದ ಕರಿಬಸಪ್ಪ, ಬಸವರಾಜ್, ಪ್ರಕಾಶ್ ಹೆದ್ನೆ, ಮುರುಗೇಂದ್ರಪ್ಪ, ರಾಮಗೊಂಡನಹಳ್ಳಿ ಸಿದ್ದೇಶಣ್ಣ, ಮಲ್ಲಶೆಟ್ಟಿಹಳ್ಳಿ ರೇವಣ್ಣ, ಬುಳ್ಳಾಪುರ ತಿಪ್ಪೇಸ್ವಾಮಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಮಾಜದ ಯುವ ಮುಖಂಡ ಕೆ.ಸಿ. ಲಿಂಗರಾಜ್ ಆನೆಕೊಂಡ ಸ್ವಾಗತಿಸಿದರು.

## ನಗರದಲ್ಲಿ ಇಂದು ಗೀತ ಗಾಯನ ಕಾರ್ಯಕ್ರಮ

ಜಿಲ್ಲಾ ಹಾಗೂ ತಾಲ್ಲೂಕು ಚುಟುಕು ಸಾಹಿತ್ಯ ಪರಿಷತ್, ಸ್ಫೂರ್ತಿ ಪ್ರಕಾಶನ (ತೆಲಿಗಿ), ಜಿಲ್ಲಾ ಲೇಖಕಿಯರ ಸಂಘ, ನಿಟ್ಟೂರು ಬಜ್ಜಿ ಹನುಮಂತಪ್ಪ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಇಂದು ಬೆಳಗ್ಗೆ 10 ಗಂಟೆಗೆ ಶ್ರೀಮತಿ ನೀಲಗುಂದ ಸಿದ್ರಾಮಣ್ಣನವರ ತೋಟದಲ್ಲಿ ಯುಗಾದಿ ಸಂಭ್ರಮ ಕವಿಗೋಷ್ಠಿ, ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ. ರಾಜಶೇಖರ್ ಗುಂಡಗಟ್ಟಿ ಅಧ್ಯಕ್ಷತೆ ವಹಿಸುವರು. ಹಿರಿಯ ಪತ್ರಕರ್ತ ಸದಾನಂದ ಹೆಗಡೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಓಂಕಾರಯ್ಯ ತವನಿಧಿ ಉಪನ್ಯಾಸ ನೀಡಲಿದ್ದಾರೆ.

ಜಯಮ್ಮ ನೀಲಗುಂದ, ವೀಣಾ ಕೃಷ್ಣಮೂರ್ತಿ, ಎಮ್. ಬಸವರಾಜ್. ಮಹಾಂತೇಶ್ ಬಿ. ನಿಟ್ಟೂರು ಮತ್ತಿತರರು ಭಾಗವಹಿಸಲಿದ್ದು, ಮಧ್ಯಾಹ್ನದ ಕವಿಗೋಷ್ಠಿ ಅಧ್ಯಕ್ಷತೆಯನ್ನು ವೀರಭದ್ರಪ್ಪ ತೆಲಿಗಿ ವಹಿಸುವರು.

ಆಶಯ ನುಡಿಯನ್ನು ಮಂಜುನಾಥ್ ಅಭಿ, ಮುಖ್ಯ ಅತಿಥಿಗಳಾಗಿ ಪ್ರಕಾಶ್ ಬೂಸ್ನೂರು, ಟಿ. ಎಸ್. ಶೈಲಜ, ವೀರೇಶ್ ಬಿ. ಎಮ್. ಜಿ ಆಗಮಿಸುವರು.

## ಪ್ರಚೋದನಾತ್ಮಕ ವಿಡಿಯೋ : ಇಬ್ಬರು ಬಂಧನ

ದಾವಣಗೆರೆ, ಏ. 12 – ವಕ್ಫ್ ಕಾಯ್ದೆ ಸಂಬಂಧ ಪ್ರಚೋದನಾತ್ಮಕ ವಾಗಿ ಮಾತನಾಡಿರುವ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ. ವಿಡಿಯೋ ಸಂಬಂಧ ಪಾಲಿಕೆ ಮಾಜಿ ಸದಸ್ಯ ಅಹಮ್ಮದ್ ಕಬೀರ್ ಖಾನ್ ಮತ್ತು ಇತರೆಯವರ ವಿರುದ್ಧ ಆಜಾದ್ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣದ ಆರೋಪಿಗಳಾದ ಭಾಷಾನಗರದ ಅಬ್ದುಲ್ ಗನಿ ಹಾಗೂ ಮಹಮ್ಮದ್ ಜುಬೇರ್ ಬಂಧಿಸಲಾಗಿದೆ. ಪ್ರಕರಣದ ಮೊದಲ ಆರೋಪಿ ಅಹಮ್ಮದ್ ಕಬೀರ್ ಖಾನ್ ಗಾಗಿ ಶೋಧ ನಡೆಸಲಾಗುತ್ತಿದೆ.

## ಆಧುನಿಕ ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಏ. 12- ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಆಧುನಿಕ ಕೋಳಿ ಸಾಕಾಣಿಕೆ ತರಬೇತಿಯು ಇದೇ ದಿನಾಂಕ 15 ಮತ್ತು 16 ರಂದು ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ನಗರದಲ್ಲಿ ಇಂದು ಭಕ್ತರ ಸಮಾವೇಶ



ಕುವೆಂಪು ಕನ್ನಡ ಭವನದಲ್ಲಿ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ( ಗದಗ) ವತಿಯಿಂದ ಪೂಜ್ಯ ಗುರು ಡಾ. ಪಂ. ಪುಟ್ಟರಾಜರ ಅಭಿಮಾನಿ ಭಕ್ತರ ಸಮಾವೇಶವು ಇಂದು ನಡೆಯಲಿದೆ. ಬೆಳಿಗ್ಗೆ 6 ಗಂಟೆಗೆ ಗುರು ಕುಮಾರ ಪಂಚಾಕ್ಷರಿ ಪುಟ್ಟರಾಜರ ಗದ್ದುಗೆಗಳಿಗೆ ರುದ್ರಾಭಿಷೇಕ, 8 ಗಂಟೆಗೆ ಪುಟ್ಟರಾಜ ಭಾವಚಿತ್ರ ಮತ್ತು ಸಾಹಿತ್ಯ ಕೃತಿಗಳ ಮೆರವಣಿಗೆ, 9 ಗಂಟೆಗೆ ಅಷ್ಟವಿಧಾರ್ಚನೆ ಮತ್ತು ಸಹಸ್ರ ಬಿಲ್ವಾರ್ಚನೆ ಮತ್ತು ಗುರು ಭಜನೆ ನಡೆಯಲಿದೆ.

ಬೆಳಿಗ್ಗೆ 10.30ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ಶ್ರೀ ಶಿವಪಂಚಾಕ್ಷರಿ ಮಹಾಸ್ವಾಮೀಜಿ ವಹಿಸಲಿದ್ದು, ಶ್ರೀ ಚನ್ನವೀರ ಸ್ವಾಮೀಜಿ ಹಿರೇಮಠ ಇವರ ನೇತೃತ್ವ ವಹಿಸಲಿದ್ದಾರೆ.

ಪಿ.ಬಿ. ವಿನಾಯಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಶ್ರೀಮತಿ ವಾಣಿ ಬಸವರಾಜ ಭಕ್ತಿ ಎಂಬುವುದು ಪ್ರೇಮದ ಸಫಲತೆ ನೋಡಾ ಎಂಬ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹೆಚ್.ಪಿ. ಕಲ್ಲಂಭಟ್, ಡಿ.ಆರ್. ಜಗದೀಶ್, ಗಿರಿಜಾ ವ್ಹಿ. ಮುಳಗುಂದ ಉಪಸ್ಥಿತರಿರುವರು. ಮಧ್ಯಾಹ್ನ 12ಕ್ಕೆ ನಡೆಯುವ ವಚನ ಗೋಷ್ಠಿ ಅಧ್ಯಕ್ಷತೆಯನ್ನು ಅಂದಾನೆಪ್ಪ ವಿಭೂತಿ ವಹಿಸಲಿದ್ದು, ಶ್ರೀಮತಿ ಮಂಜುಳಾ ಗೋ. ನಾಯ್ಕ, ಎಂ.ಕೆ. ರೇವಣಸಿದ್ದಪ್ಪ ಉಪಸ್ಥಿತರಿರುವರು. ಆಧುನಿಕ ವಚನಕಾರರು ವಚನಗೋಷ್ಠಿ ನಡೆಸಿಕೊಡಲಿದ್ದಾರೆ.

ಮಧ್ಯಾಹ್ನ 2ಕ್ಕೆ ನಡೆಯುವ ಭಕ್ತಿ ಗೀತೆ ಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಪಿ.ಎಂ. ಕೊಟ್ರಯ್ಯ ವಹಿಸಲಿದ್ದು, ಭಕ್ತಿ ಪಂಥದ ಕವಿಗಳು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸಂಜೆ 4.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಶ್ರೀ ಚನ್ನವೀರ ಸ್ವಾಮಿಗಳು ಹಿರೇಮಠ ಅವರು ಸಾನ್ನಿಧ್ಯ ವಹಿಸಲಿದ್ದು, ಡಾ. ಸುಮಾ ಬಸವರಾಜ ಹಡಪದ ಅವರ ಅಧ್ಯಕ್ಷತೆಯಲ್ಲಿ ಎ.ಹೆಚ್. ಸಿದ್ದಲಿಂಗ ಸ್ವಾಮಿ ಅತಿಥಿಗಳಾಗಿ ಉಪಸ್ಥಿತರಿರುವರು.

ವೇ.ಪಂ. ಗಂಗಾಧರಯ್ಯ ಹಿರೇಮಠ, ಶಿವಬಸಯ್ಯ ಪಂ. ಚರಂತಿಮಠ, ಶ್ರೀಮತಿ ದೇವಿಕಾ ಕೆ. ಜೋಗಿ, ಚಂಪಾ ಹುಣಸಿಕಟ್ಟಿ ಗುರು ಸೇವಾ ಸತ್ಕಾರ ಪಡೆಯಲಿದ್ದಾರೆ.

ಶ್ರೀಮತಿ ಸೌಮ್ಯ ಸತೀಶ್, ಶ್ರೀಮತಿ ಸುಮಂಗಲಾ ರವಿ ಚಕ್ರಸಾಲಿ, ಶ್ರೀಮತಿ ಮಮತಾ ನಾಗರಾಜ್, ಶ್ರೀಮತಿ ಜಯಶ್ರೀ ಬೆರಗುಡ, ಶ್ರೀಮತಿ ವಾರುಣಿ ದೇಶಪಾಂಡೆ, ಶ್ರೀಮತಿ ವಿಜಯಲಕ್ಷ್ಮಿ ಕು. ರಹಿರೇಮಠ ಅನ್ವರಿ, ಲಲಿತ ಕುಮಾರ ಜೈನ್, ಎ.ಬಿ. ರುದ್ರಮ್ಮ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.

# ಕೊಮಾರನಹಳ್ಳಿಯಲ್ಲಿ ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಏ. 12- ಸುಕ್ಷೇತ್ರ ಕೊಮಾರನಹಳ್ಳಿಯ ಹೇಳವನಕಟ್ಟೆ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿಯ ದವನ ಪೂರ್ಣಿಮಾ ಬ್ರಹ್ಮ ರಥೋತ್ಸವವು ಶನಿವಾರ ಮಧ್ಯಾಹ್ನ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ರಥಕ್ಕೆ ಪೂಜೆ ಸಲ್ಲಿಸಿ, ಮಂಗಳಾರತಿ ಮಾಡಿದ ನಂತರ ಗೋವಿಂದಾ ಗೋವಿಂದಾ ಎಂಬ ಜಯಘೋಷದೊಂದಿಗೆ ಭಕ್ತರು ರಥವನ್ನು ಎಳೆದು ಸಂಭ್ರಮಿಸಿದರು. ವಾದ್ಯ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು.

ರಥೋತ್ಸವದ ವೇಳೆ ಭಕ್ತರು ರಥಕ್ಕೆ ಬಾಳೆಹಣ್ಣು, ದ್ವಿದಳ ಧಾನ್ಯಗಳನ್ನು ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವದ ಬಳಿಕ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಪ್ರದಾಯ ದಂತೆ ಸಂಜೆ ಗ್ರಾಮಸ್ಥರು ಪುನಃ ರಥವನ್ನು ಎಳೆದು ಮೂಲ ಸ್ಥಳಕ್ಕೆ ನಿಲ್ಲಿಸಿದರು.

ನಾಳೆ ಭಾನುವಾರ ಬೆಳಿಗ್ಗೆ 8.30ಕ್ಕೆ ಆಂಜನೇಯ ಸ್ವಾಮಿ ಉಚ್ಚಾಯ ನಡೆಯಲಿದ್ದು, ಸಂಜೆ 4 ಗಂಟೆಗೆ ಮುಳ್ಳೋತ್ಸವ, ಸಂಜೆ ಓಕಳಿ, ರಾತ್ರಿ ಭೂತಸೇವೆ ಬಳಿಕ ರಸಮಂಜರಿ ಕಾರ್ಯಕ್ರಮ ಇರುತ್ತದೆ.

# ಮಧುಮೇಹ ನಿರ್ಮೂಲನೆ ಆಂದೋಲನ

**ನಗರದಲ್ಲಿ ಇಂದು**

ಶ್ರೀ ಚಂಡಿಕಾಶ್ರಮದ ಓಂ ಚಂಡಿಕಾ ಸೇವಾ ಟ್ರಸ್ಟ್ ಆಶ್ರಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಭಗತ್‌ಸಿಂಗ್ ನಗರದ ಶ್ರೀ ಚಂಡಿಕಾಶ್ರಮದ ಸಭಾಂಗಣದಲ್ಲಿ ಸಾರ್ವಜನಿಕರಿಗೆ ಉಚಿತ ಮಧುಮೇಹ ನಿರ್ಮೂಲನೆ ಆಂದೋಲನ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎನ್. ಕೌಶಲ್ಯ ಬಾಯಿ ತಿಳಿಸಿದ್ದಾರೆ. ಸಾಲಿಗ್ರಾಮ ಗಣೇಶ್ ಶೆಣೈ ಉದ್ಘಾಟನೆ ನೆರವೇರಿಸಲಿದ್ದು, ಅಘೋರಿ ಚಿದಂಬರ ಯೋಗಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರಭಾ ರವೀಂದ್ರ, ಲಲಿತಾ ಕಲ್ಲೇಶ್, ಶಾರದಮ್ಮ ಶಿವನಪ್ಪ ಆಗಮಿಸಲಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9380389236.

## ಕಂಚಿಕೆರೆ ಸರ್ಕಾರಿ ಸ್ವತಂತ್ರ ಪಿಯು ಕಾಲೇಜಿಗೆ ಶೇ.90 ಫಲಿತಾಂಶ

ಹರಪನಹಳ್ಳಿ,ಏ.12- ತಾಲ್ಲೂಕಿನ ಕಂಚಿಕೆರೆ ಗ್ರಾಮದ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜಿಗೆ ಈ ಬಾರಿಯ ಪರೀಕ್ಷೆಯಲ್ಲಿ ಶೇ.90 ಫಲಿತಾಂಶ ಬಂದಿದೆ. ಪರೀಕ್ಷೆಗೆ ಕುಳಿತಿದ್ದ 61 ವಿದ್ಯಾರ್ಥಿಗಳ ಪೈಕಿ 55 ಜನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಇದರಲ್ಲಿ 8 ಡಿಸ್ಟಿಂಕ್ಷನ್, 33 ಪ್ರಥಮ ದರ್ಜೆ, 11 ದ್ವಿತೀಯ ಹಾಗೂ ಮೂವರು ತೃತೀಯ ದರ್ಜೆ ಸೇರಿವೆ. ಕಲಾ ವಿಭಾಗದ ಎ.ಐಶ್ವರ್ಯ 523 ಅಂಕ ಗಳಿಸಿ (ಶೇ.87.16) ಮತ್ತು ವಾಣಿಜ್ಯ ವಿಭಾಗದ ಅನುಷ 564 ಅಂಕಗಳಿಸಿ (ಶೇ.94) ಉತ್ತಮ ಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

## ವಂದೇ ಭಾರತ ರೈಲು ನಿಲುಗಡೆಗೆ ಮನವಿ

ರಾಣೇಬೆನ್ನೂರು, ಏ.12- ಜಿಲ್ಲೆಯಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ರಾಣೇಬೆನ್ನೂರು ನಗರಕ್ಕೆ ವಂದೇ ಭಾರತ ರೈಲು ಗಾಡಿಯನ್ನು ನಿಲುಗಡೆ ಮಾಡಬೇಕೆಂದು ವರ್ತಕರ ಸಂಘದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ. ರಾಣೇಬೆನ್ನೂರು, ಶಿಕಾರಿಪುರ ಹಾಗೂ ಶಿವಮೊಗ್ಗ ರೈಲು ಮಾರ್ಗವನ್ನು ಹಾಗೂ ಇಲ್ಲಿನ ರೈಲು ನಿಲ್ದಾಣದ ಅಭಿವೃದ್ಧಿ ಕಾಮಗಾರಿ ತ್ವರಿತಗೊಳಿಸುವಂತೆ ಒತ್ತಾಯಿಸಿ ವರ್ತಕರ ಸಂಘದಿಂದ ಸಚಿವ ಸೋಮಣ್ಣ, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಇಲಾಖೆಯ ಎಲ್ಲ ಹಂತದ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ವರ್ತಕರ ಸಂಘದ ಅಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ ತಿಳಿಸಿದ್ದಾರೆ.

# ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪುರಸಭೆ ಅಧ್ಯಕ್ಷರಿಂದಲೇ ಧರಣಿ

ಮಲೇಬೆನ್ನೂರು, ಏ. 12- ತಮಗೆ ಹಾಗೂ ಪುರಸಭೆ ಸದಸ್ಯರಿಗೆ ಅವಾಚ್ಯವಾಗಿ ಮಾತನಾಡಿರುವ ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪುರಸಭೆ ಅಧ್ಯಕ್ಷ ಹನುಮಂತಪ್ಪ ಅವರು ತಮ್ಮ ತಾಯಿಯ ಜೊತೆ ಪುರಸಭೆ ಕಛೇರಿ ಎದುರು ಧರಣಿ ನಡೆಸಿದ ಘಟನೆ ನಡೆದಿದೆ.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಟ್ಟುಕೊಂಡು ಧರಣಿ ನಡೆಸಿದ ಹನುಮಂತಪ್ಪ ಅವರಿಗೆ ಅನೇಕ ಪುರಸಭೆ ಸದಸ್ಯರು ಪರೋಕ್ಷವಾಗಿ ಬೆಂಬಲ ವ್ಯಕ್ತಪಡಿಸಿದರು.

ಪುರಸಭೆ ಮುಖ್ಯಾಧಿಕಾರಿಗಳ ದೂರವಾಣಿ ಸಂಭಾಷಣೆಯಲ್ಲಿ ನನಗೆ ಮತ್ತು ಪುರಸಭೆ ಸದಸ್ಯರಿಗೆ ಅವಾಚ್ಯವಾಗಿ ಮಾತನಾಡಿರುವ ರೆಕಾರ್ಡಿಂಗ್ ಅನ್ನು ಪೊಲೀಸರು ಮತ್ತು ಜಿಲ್ಲಾಧಿಕಾರಿಗಳಿಗೆ ನೀಡಿರುವ ದೂರಿನಲ್ಲಿ ಕೊಟ್ಟಿದ್ದೇನೆ. ಆದರೆ ಇದುವರೆಗೂ ಅವರ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಕ್ರಮ ಕೈಗೊಳ್ಳುವವರಿಗೂ ಧರಣಿ ನಡೆಸುತ್ತೇವೆಂದೂ ಹನುಮಂತಪ್ಪ ಮತ್ತು ಅವರ ಕುಟುಂಬದವರು ಪಟ್ಟು ಹಿಡಿದು ಧರಣಿ ಆರಂಭಿಸಿರುವ ವಿಷಯ ತಿಳಿದ ಉಪ ತಹಶೀಲ್ದಾರ್ ಆರ್. ರವಿ ಅವರು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಜಿಲ್ಲಾಧಿಕಾರಿಗಳಿಗೆ ನೀವು ನೀಡಿರುವ ದೂರಿನನ್ವಯ ದಾವಣಗೆರೆ ತಹಶೀಲ್ದಾರ್ ಎಂ.ಬಿ. ಅಶ್ವತ್ಥ ಅವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಿದ್ದಾರೆ. ಅವರು ತನಿಖಾ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಿದ ನಂತರ ಲೋಪ ಕಂಡು ಬಂದಲ್ಲಿ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತಾರೆಂಬ ಭರವಸೆಯನ್ನು ನೀಡಿದ ಉಪ ತಹಶೀಲ್ದಾರ್ ರವಿ ಅವರು ಧರಣಿ ಕೈ ಬಿಡುವಂತೆ ಪುರಸಭೆ ಅಧ್ಯಕ್ಷರಿಗೆ ಮನವಿ ಮಾಡಿದರು.

ಇದಕ್ಕೆ ಒಪ್ಪದ ಹನುಮಂತಪ್ಪನವರು ಧರಣಿ ಮುಂದುವರಿಸಿದಾಗ ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಖಲೀಲ್, ಬಸವರಾಜ್ ದೊಡ್ಮನಿ, ಭೋವಿಕುಮಾರ್, ಯುಸೂಫ್ ಖಾನ್, ಜಿಗಳೇರ ಹಾಲೇಶಪ್ಪ, ಓ.ಜಿ. ಕುಮಾರ್, ಭಾನುವಳ್ಳಿ ಸುರೇಶ್ ಮತ್ತಿತರರು ಸೇರಿ ಸುಮಾರು ಒಂದು ತಾಸು ಕುಳಿತುಕೊಂಡು ಮಧ್ಯಾಹ್ನದ ನಂತರ ಅಧ್ಯಕ್ಷರ ಮನವೊಲಿಸಿ, ಧರಣಿಯನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಿದರು ಎನ್ನಲಾಗಿದೆ.

ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು.




## ಮಲೇಬೆನ್ನೂರು ಪುರಸಭೆಯಲ್ಲಿ ಆಡಳಿತಾತ್ಮಕ ಲೋಪ : ತನಿಖಾ ತಂಡ ರಚನೆ

ಪುರಸಭೆ ಮುಖ್ಯಾಧಿಕಾರಿಗಳ ವಿರುದ್ಧವೇ ಪುರಸಭೆ ಅಧ್ಯಕ್ಷರು ಧರಣಿ ನಡೆಸಿದ್ದು ಎಲ್ಲರ ಗಮನ ಸೆಳೆಯಿತು. ಅಲ್ಲದೇ ಪುರಸಭೆಯಲ್ಲಿ ಅಧಿಕಾರಿಗಳು ಆಡಳಿತಾತ್ಮಕ ಲೋಪ ಎಸಗಿ ದ್ದಾರೆ ಎಂದು ಆರೋಪಿಸಿ, ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರು ನೀಡಿರುವ ದೂರಿನನ್ವಯ ತನಿಖಾ ತಂಡವನ್ನು ಜಿಲ್ಲಾಧಿಕಾರಿಗಳು ರಚಿಸಿ, ತನಿಖೆ ಆದೇಶ ನೀಡಿರುವುದು ಕೂಡಾ ಸಾರ್ವಜನಿಕರಿಗೆ ಅಚ್ಚರಿ ಮೂಡಿಸಿದೆ.


## ಸಾರ್ವಜನಿಕ ಪ್ರಕಟಣೆ

1) ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ರಿಜಿಸ್ಟರ್ ಸರ್ವೆ ನಂಬರ್ 29/2, 0 ಎಕರೆ-20 ಗುಂಟೆ ಜಮೀನು ಹಾಲಿನ ರಾಜಪ್ಪ@ ರಾಜಪ್ಪ ಬಿನ್ ಹನುಮಂತಪ್ಪ ಇವರ ಹೆಸರಿಗೆ ಇರತಕ್ಕ ಜಮೀನಿನ ಚೆಕ್ ಬಂದಿ : ಪೂರ್ವಕ್ಕೆ : ಸರ್ವೆ ನಂ. 28/8 ವಿಜಯ್‌ಕುಮಾರ್ ಪೂನಂಚಂದ್ ಇವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂಬರ್ 29/1B ಗಂಗಪ್ಪ ಹಾಗೂ ಬುಳ್ಳಾಪುರದ ರಸ್ತೆ ಇವರ ಜಮೀನು, ಉತ್ತರಕ್ಕೆ ; ಸರ್ವೆ ನಂಬರ್ 29/1A2 ವಿಜಯ್‌ಕುಮಾರ್ ಪೂನಂಚಂದ ಇವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂಬರ್ 29/6 ವೀರಮ್ಮ ಕೋಂ ವೀರಭದ್ರಪ್ಪ ಇವರ ಜಮೀನು.

2) ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ರಿಜಿಸ್ಟರ್ ಸರ್ವೆ ನಂಬರ್ 29/6, 0 ಎಕರೆ 20 ಗುಂಟೆ, ವೀರಮ್ಮ ಕೋಂ. ವೀರಭದ್ರಪ್ಪ ಇವರ ಜಮೀನಿನ ಚೆಕ್ ಬಂದಿ ಇವರ ಹೆಸರಿಗೆ ಇರತಕ್ಕ ಜಮೀನಿನ ಚೆಕ್ ಬಂದಿ : ಪೂರ್ವಕ್ಕೆ : ಸರ್ವೆ ನಂಬರ್ 28/8 ವಿಜಯ್‌ಕುಮಾರ್ ಪೂನಂಚಂದ್ ಇವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂಬರ್ 29/1B ಗಂಗಪ್ಪ ಹಾಗೂ ಬುಳ್ಳಾಪುರದ ರಸ್ತೆ ಇವರ ಜಮೀನು, ಉತ್ತರಕ್ಕೆ : ಸರ್ವೇ ನಂಬರ್ 29/2 ರಾಜಪ್ಪ ಬಿನ್ ಹನುಮಂತಪ್ಪ ಇವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂಬರ್ 29/7 ರಾಜಪ್ಪ ಬಿನ್ ಹನುಮಂತಪ್ಪ ಇವರ ಜಮೀನು.

3) ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ರಿಜಿಸ್ಟರ್ ಸರ್ವೆ ನಂಬರ್ 29/7, 1 ಎಕರೆ-00 ಗುಂಟೆ, ರಾಜಪ್ಪ ಬಿನ್ ಹನುಮಂತಪ್ಪ @ ಹಾಲಿನ ರಾಜಪ್ಪ ಇವರ ಜಮೀನಿನ ಚೆಕ್ ಬಂದಿ : ಪೂರ್ವಕ್ಕೆ : ನಂಬರ್ 28/8 ವಿಜಯ್‌ಕುಮಾರ್ ಪೂನಂಚಂದ್ ಇವರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂಬರ್ 29/1B ಗಂಗಪ್ಪ ಹಾಗೂ ಬುಳ್ಳಾಪುರದ ರಸ್ತೆ ಇವರ ಜಮೀನು, ಉತ್ತರಕ್ಕೆ : ಸರ್ವೆ ನಂಬರ್ 29/6 ವೀರಮ್ಮ ಕೋಂ. ವೀರಭದ್ರಪ್ಪ ಇವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂಬರ್ 29/3 ಶಶಿಧರ ಜಿ.ಎನ್. ಇವರ ಜಮೀನು.

ಈ ಮೇಲ್ಕಂಡ ರಿಜಿಸ್ಟರ್ ಸರ್ವೆ ನಂಬರ್ 29/2, 29/6 & 29/7 ರಲ್ಲಿ ಬರತಕ್ಕ ಒಟ್ಟು ಎರಡು (2) - ಎಕರೆ, 00-ಗುಂಟೆ, ಜಮೀನನ್ನು ದಾವಣಗೆರೆ ನಗರವಾಸಿಗಳಾದ ಅಶೋಕ ಬಿ. ಮಣಿಕಂಠ ಆಚಾರ್ಯ, ಸುರೇಶ್ ಕುಮಾರ್, ಬಿ. ಬಸವನಗೌಡ ಮತ್ತು ಸುಹಾಸ ಕೃಷ್ಣ ಜಾಧವ ಇವರುಗಳು ಕ್ರಯಕ್ಕೆ ಪಡೆಯಲು ನಿರ್ಧರಿಸಿದ್ದು, ಕ್ರಯ ನೋಂದಣಿ ಪೂರ್ವ ಈ ಜಮೀನಿನ ಮಾಲೀಕರುಗಳ ಯಾವುದಾದರೂ ಋಣ, ತಂಟೆ ತಕರಾರುಗಳು, ಇತರೆ ಹಕ್ಕು ಬಾಧ್ಯತೆಗಳು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆ ದಿನದಿಂದ ಏಳು (7) ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಿಳಿಸತಕ್ಕದ್ದು.

ಸಹಿ/- ಕೆ.ಬಿ. ಶೈಲಶ್ರೀ, ವಕೀಲರು, KAR-70/98

ಎಸ್.ಎಸ್. ಲೇಔಟ್, ಎ ಬ್ಲಾಕ್, ಇನ್‌ಡೋರ್ ಸ್ಟೇಡಿಯಂ ರೋಡ್, ದಾವಣಗೆರೆ. ಫೋ. : 94486 58502


## ಆರ್.ಕೆ. ಮೋಹನ್ ನಿಧನ



ದಾವಣಗೆರೆ ಸಿಟಿ ಲೇಬರ್ ಕಾಲೋನಿ, 7ನೇ ಕ್ರಾಸ್, ಗಣೇಶ ದೇವಸ್ಥಾನದ ಹಿಂಭಾಗದ ವಾಸಿ ಆರ್.ಕೆ. ಮೋಹನ್ (ಸುರೇಶ್ ಟೈಲರ್) 67 ವರ್ಷ ಇವರು ದಿನಾಂಕ 12.04.2025ರ ಶನಿವಾರ ಸಂಜೆ 6.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 13.04.2025ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಲೇಬರ್ ಕಾಲೋನಿಯಲ್ಲಿರುವ ಬೃಂದಾವನದಲ್ಲಿ ನೆರವೇರಿಸಲಾಗುವುದು.

**ರಕ್ತ ದಾನ ಶ್ರೇಷ್ಠ ದಾನ**

## ನಗರದಲ್ಲಿ ಅಪರಿಚಿತನ ಶವ ಪತ್ತೆ

ದಾವಣಗೆರೆ, ಏ. 12- ನಗರದ ಎಂಸಿಸಿ ಎ ಬ್ಲಾಕ್ 6 ನೇ 2ನೇ ಕ್ರಾಸ್ ಬಳಿ 60- 65 ವಯಸ್ಸಿನ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾನೆ.

ದುಂಡು ಮುಖ, ದೃಢವಾದ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣದವನಾಗಿದ್ದು, ಎಡ ಭಾಗದ ಎದೆಯಲ್ಲಿ ತೆಲುಗು ಅಕ್ಷರದಲ್ಲಿ 'ಮೌನ' ಅಂತಾ ಅಚ್ಚೆ ಗುರುತು ಇರುತ್ತದೆ. ಬಿಳಿ ಗಡ್ಡ-ಮೀಸೆ ಇದ್ದು, ಕೆಂಪು ಬಣ್ಣದ ತುಂಬು ತೋಳಿನ ಟೀ ಶರ್ಟ್, ಕಪ್ಪು ಬಣ್ಣದ ಕೆಂಪು ಗೆರೆಯುಳ್ಳ ಚಡ್ಡಿ ಧರಿಸಿರುತ್ತಾನೆ.

ಸಂಬಂಧಪಟ್ಟವರು ಬಡಾವಣೆ ಠಾಣೆ (9480803249, 08192-259213)ಯನ್ನು ಸಂಪರ್ಕಿಸಬಹುದು.

# ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಹರಪನಹಳ್ಳಿ,ಏ.12- ಕೇಂದ್ರ ಸರ್ಕಾರವು ಗ್ಯಾಸ್ ಬೆಲೆ ಏರಿಕೆ ಖಂಡಿಸಿ ತಾಲ್ಲೂಕು, ಬ್ಲಾಕ್ ಮತ್ತು ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಂ.ಡಿ. ಜಿಷಾನ್ ಮಾತನಾಡಿ, ಇತ್ತೀಚೆಗೆ ಕೇಂದ್ರ ಸರ್ಕಾರ ಗ್ಯಾಸ್ ಬೆಲೆ ಏರಿಸಿ ದೇಶದ ಬಡಜನರ ಬದುಕಿಗೆ ಕೊಳ್ಳಿ ಇಟ್ಟಿದೆ. ದೇಶದ ಬಹುಸಂಖ್ಯಾತ ಕೂಲಿ ಕಾರ್ಮಿಕರು, ರೈತಾಪಿ ವರ್ಗ, ದೀನ - ದಲಿತ ವರ್ಗದ ಬದುಕಿಗೆ ನೀರು ಎರಚಿರುವ ಕೇಂದ್ರ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿ. ಈ ಕೂಡಲೇ ಏರಿಕೆ ಮಾಡಿರುವ ಬೆಲೆಯನ್ನು ಇಳಿಕೆ ಮಾಡದೇ ಹೋದರೆ ರಾಜ್ಯದ ಪ್ರತಿ ವಿಧಾನ ಸಭಾ ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಬೃಹತ್ ಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಚೌಡಪ್ಪ ಮಾತನಾಡಿ, ಕಚ್ಚಾ ತೈಲದ ಬೆಲೆ ಇಳಿಕೆಯಾದರೂ, ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ನಿಯಂತ್ರಿಸದ ಕೇಂದ್ರ ಸರ್ಕಾರ, ಈಗ ಅಡುಗೆ ಅನಿಲದ ದರ ಹೆಚ್ಚಿಸುವ ಮೂಲಕ ಬಡವರ ಬದುಕಿನ ಮೇಲೆ ಬರೆ ಎಳೆದಿದೆ ಎಂದು ಕಿಡಿ ಕಾರಿದರು.



ಹರಪನಹಳ್ಳಿ

ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಸವರಾಜ್ ಹುಲಿಯಪ್ಪನವರ್ ಮಾತನಾಡಿ, ರೈತರಿಗೆ ನೆರವಾಗಬೇಕು ಎನ್ನುವ ಒಳ್ಳೆಯ ಉದ್ದೇಶದಿಂದ ಹಾಲಿನ ದರವನ್ನು ಏರಿಸಿದ್ದರೂ, ಈ ವಿಚಾರದ ಸಂಪೂರ್ಣ ಮಾಹಿತಿ ಇಲ್ಲದೆ ಪ್ರತಿಭಟನೆ ನಡೆಸುವ ಮೂಲಕ ಬಿಜೆಪಿಯು ತನ್ನ ರೈತ ವಿರೋಧಿ ನೀತಿಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ. ರಾಜ್ಯಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡುವಲ್ಲಿ ಅನ್ಯಾಯ ಮಾಡುತ್ತಿದೆ ಎಂದು ದೂರಿದರು.

ಈ ಸಂದರ್ಭದಲ್ಲಿ ಹರಪನಹಳ್ಳಿ ಬ್ಲಾಕ್ ಅಧ್ಯಕ್ಷ ಹೆಚ್.ಟಿ.ಹನುಮಂತಪ್ಪ, ಉಪಾಧ್ಯಕ್ಷ ಕೆ.ಸಿದ್ದನಗೌಡ್ರು, ಹರಪನಹಳ್ಳಿ ಬ್ಲಾಕ್ ಉಪಾಧ್ಯಕ್ಷ ಜಿ.ಮನು, ಎನ್. ರಾಜಾಸಾಬ್, ಮಮತಾ, ಕಾರ್ಯದರ್ಶಿ ರೇಣುಕಾ, ಎನ್.ಎಸ್.ಯು.ಐ ತಾಲ್ಲೂಕು ಅಧ್ಯಕ್ಷ ಅಬ್ಬು ಸಾಲೀಯ, ಯುವ ಕಾಂಗ್ರೆಸ್ ಪದಾಧಿಕಾರಿಗಳಾದ ಕಾಂತ್, ಸಾಧಿಕ್, ವಾಸೀಮ್, ಸೋಮಣ್ಣ, ಶಿವರಾಜ್, ಶಿವು, ವಿಜಯ್ ಮತ್ತು ಇತರರು ಉಪಸ್ಥಿತರಿದ್ದರು.


ಡಾ. ತಿಮ್ಮಾರೆಡ್ಡಿ ಪಿ.ಯು. ಕಾಲೇಜ್
ದಾವಣಗೆರೆ
Girls Campus : LIC Colony, Vidyanagar, B.I.E.T Road Davanagere. Boys Campus : Dollars Colony, Shamanur, Devarabelakere Road, Davanagere -577005.
ದ್ವಿತೀಯ ಪಿಯುಸಿ ಫಲಿತಾಂಶ-2025
“ದಾವಣಗೆರೆಯ ಏಕೈಕ ಪ್ರತ್ಯೇಕ ಬಾಲಕ ಮತ್ತು ಬಾಲಕಿಯರ ಪದವಿಪೂರ್ವ ಕಾಲೇಜು
ಹಾಗೂ NEET, JEE, K CET ತರಬೇತಿ ಕೇಂದ್ರ”
Congratulations
Distinction 54
1st Class 163
TOPPER
RAKSHA A K 577
TOPPER
M MALATESH 575
NIVEDITA L 576
ALIYA ANJUM 569
BINDUSHREE H 565
RUKSAR BANU 555
P KEERTHI 553
PUSHPA K T 553
KANCHANA K S 551
MANJULA M 549
NANDINI S 549
YASHASWINI G K 543
CHANDANA A 538
SHREYA B K 538
D SHREYA 536
VAISHNAVI T 535
ASHIKA K R 534
HANIYA FALAK 533
SANIKA S 531
ANUSHA P T 530
SAHANA S 530
VARSHITHA S A 529
JYOTHI H 527
KAVYASHREE 523
AMULYA K R 522
SHREYA G 521
VANDANA D B 521
INCHARA A V 520
NANDITHA G V 516
TEJASWINI 516
THRISHA H T 516
BINDU P T 515
BHAVANA P 514
PRIYANKA A 513
NANDITHA D 512
NAYANA J K 512
SAHANA M 510
KENCHAPPA 556
SHIVAKUMAR 552
PRAJWAL 553
PUNITH YADAV 539
PRASHANTH K 538
SAMEER 536
MANOJ T 534
ABUSADIQ SAMEER 533
A HARSHAVARDHAN 532
NAVEEN 532
AMARANATH 530
AKASH NAIK 528
DHANUSH R S 527
ABHYA 524
PUNITH KUMAR 523
SUJAN M 513
NITISH KUMAR 510
ADMISSIONS OPEN
PUC SCIENCE
PCMB & PCMCs
PUC + NEET
PUC + JEE-IIT
(Mains & Advance)
PUC + K CET
SEPARATE CAMPUS FOR GIRLS & BOYS WITH
HOSTEL & TRANSPORT FACILITY
9036019427,9036019428,9036019425,9964636810
9900055536,9900077734,9900077729,9148467604

# ಎರಡು ವಾರಗಳಲ್ಲಿ ಮೂರನೇ ಬಾರಿಗೆ ಯುಪಿಐ ಪಾವತಿ ವ್ಯತ್ಯಯ




ನವದೆಹಲಿ, ಏ. 12 - ಶನಿವಾರ ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (ಯುಪಿಐ) ಪಾವತಿ ವ್ಯವಸ್ಥೆಯಲ್ಲಿ ಆನ್‌ಲೈನ್ ಪಾವತಿದಾರರು ಸಮಸ್ಯೆಯನ್ನು ಎದುರಿಸಿದರು. ಕಳೆದ ಎರಡು ವಾರಗಳಲ್ಲಿ ಯುಪಿಐ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿರುವುದು ಇದು ಮೂರನೇ ಬಾರಿ. ಈ ಹಿಂದೆ ಮಾರ್ಚ್ 26 ಮತ್ತು ಏಪ್ರಿಲ್ 2 ರಂದು ಕೂಡ ಇಂತಹ ಸಮಸ್ಯೆಗಳು ಕಂಡುಬಂದಿದ್ದವು.

ಸೇವಾ ವೈಫಲ್ಯವನ್ನು ಗುರುತಿಸುವ ಡೌನ್‌ಡಿಟೆಕ್ಟರ್ ವೇದಿಕೆಯ ಪ್ರಕಾರ, ಶನಿವಾರ ಬೆಳಿಗ್ಗೆ 11.30 ರಿಂದ ಯುಪಿಐ ಪಾವತಿ ವೈಫಲ್ಯದ ವರದಿಗಳು ಆರಂಭವಾಗಿವೆ. ರಿಸರ್ವ್ ಬ್ಯಾಂಕ್ ನಿಯಂತ್ರಿತ ಸಂಸ್ಥೆಯಾದ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ), ಯುಪಿಐ ವ್ಯವಸ್ಥೆಯನ್ನು ನಿರ್ವಹಿಸುತ್ತದೆ.

ಬಳಕೆದಾರರಿಗೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿದಿದ್ದು, ಆಂತರಿಕ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಎನ್‌ಪಿಸಿಐ ತಿಳಿಸಿದೆ.

ಯುಪಿಐ ವ್ಯವಸ್ಥೆಯು ಯಾವುದೇ ಶುಲ್ಕವಿಲ್ಲದೆ ತ್ವರಿತ ಪಾವತಿ ಸೌಲಭ್ಯವನ್ನು ಒದಗಿಸುತ್ತದೆ. ಈ ಕಾರಣದಿಂದಾಗಿ ಯುಪಿಐ ಬಳಕೆಯು ದೇಶಾದ್ಯಂತ ವ್ಯಾಪಕವಾಗಿ ಹೆಚ್ಚಾಗಿದೆ. ಕಳೆದ ಮಾರ್ಚ್ ತಿಂಗಳಲ್ಲಿ ಯುಪಿಐ ಮೂಲಕ ದಾಖಲೆಯ 24.77 ಲಕ್ಷ ಕೋಟಿ ರೂಪಾಯಿಗಳ ವಹಿವಾಟು ನಡೆದಿದೆ. ಇದು ಹಿಂದಿನ ತಿಂಗಳಿಗಿಂತ ಶೇಕಡಾ 12.7 ರಷ್ಟು ಹೆಚ್ಚಾಗಿದೆ.

# ಟ್ರಂಪ್ ಸುಂಕದಿಂದ ವಿನಾಯಿತಿ

**(1ನೇ ಪುಟದಿಂದ)** ಈ ವಿನಾಯಿತಿ ನೀಡಲಾಗಿದೆ. ಇಂತಹ ಉಪಕರಣ ಗಳಿಗೆ ಟ್ರಂಪ್ ಘೋಷಿಸಿದ್ದ ಶೇ. 145ರ ಸುಂಕದ ಬದಲಿಗೆ ಕೇವಲ ಶೇ. 10ರ ಮೂಲ ಸುಂಕವನ್ನು ವಿಧಿಸಲಾಗುವುದು. ಇದು ಚೀನಾ ಸೇರಿದಂತೆ ಎಲ್ಲ ದೇಶಗಳಿಂದ ಆಮದಾಗುವ ಎಲೆಕ್ಟ್ರಾನಿಕ್ ವಸ್ತುಗಳಿಗೆ ಅನ್ವಯವಾಗಲಿದೆ.

ಹಲವು ದೇಶಗಳಿಂದ ಆಮದಾಗುವ ಸರಕುಗಳ ಮೇಲೆ ಟ್ರಂಪ್ ಆರಂಭದಲ್ಲಿ ಭಾರೀ ಸುಂಕ ವಿಧಿಸಿದ್ದರು. ಆದರೆ, ನಂತರದಲ್ಲಿ ಈ ಕಠಿಣ ನಿಯಮಗಳನ್ನು ಹಲವು ಬಾರಿ ಸಡಿಲಗೊಳಿಸಿದ್ದಾರೆ.

# ಸುಂಕ ಹೇರಿಕೆಯಾದರೂ ಐಫೋನ್ ಉತ್ಪಾದನೆ ಕಷ್ಟಸಾಧ್ಯ

## ಅಮೆರಿಕದಲ್ಲಿ ಫೋನ್ ಉತ್ಪಾದನಾ ವೆಚ್ಚ ಮೂರು ಪಟ್ಟು ಹೆಚ್ಚು

ವಾಷಿಂಗ್ಟನ್, ಏ. 12 - ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಭಾರೀ ಸುಂಕ ವಿಧಿಸಿದ್ದಾರೆ. ಆದರೂ, ಐಫೋನ್ ಉತ್ಪಾದಿಸುವ ಕಂಪನಿಯಾದ ಆಪಲ್‌ಗೆ ಅಮೆರಿಕದಲ್ಲಿ ತನ್ನ ಉತ್ಪಾದನಾ ಘಟಕವನ್ನು ಆರಂಭಿಸುವುದು ಕಷ್ಟಸಾಧ್ಯವಾಗಿದೆ.

ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕವು ಶೇ. 145ರಷ್ಟು ಸುಂಕ ವಿಧಿಸಿದೆ. ಆದಾಗ್ಯೂ, ಅಮೆರಿಕದಲ್ಲಿ ಐಫೋನ್ ಉತ್ಪಾದನೆಗೆ ಸಾಕಷ್ಟು ಸವಾಲುಗಳಿವೆ. 18 ವರ್ಷಗಳ ಹಿಂದೆ ಮೊದಲ ಐಫೋನ್ ಮಾದರಿಯನ್ನು ಬಿಡುಗಡೆ ಮಾಡಲಾಗಿತ್ತು. ಆನಂತರ, ಈ ಫೋನ್‌ಗಳ ಉತ್ಪಾದನೆಯು ಬಹುತೇಕ ವಿದೇಶಗಳಲ್ಲಿ ನಡೆಯುತ್ತಿದೆ. 1990ರ ದಶಕದಲ್ಲಿ ಆಪಲ್ ಕಂಪನಿಯು ತನ್ನ ಉತ್ಪಾದನಾ ಘಟಕಗಳನ್ನು ಚೀನಾಕ್ಕೆ ಸ್ಥಳಾಂತರಿಸಿತು.

ಪ್ರಸ್ತುತ, ಅಮೆರಿಕದಲ್ಲಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಶತಕೋಟಿಗಟ್ಟಲೆ ಡಾಲರ್‌ಗಳ ಹೂಡಿಕೆ ಮತ್ತು ಹಲವು ವರ್ಷಗಳ ಸಮಯ ಬೇಕಾಗಿದೆ. ಇದರ ಜೊತೆಗೆ, ಅಮೆರಿಕದಲ್ಲಿ ಐಫೋನ್ ಉತ್ಪಾದನಾ ವೆಚ್ಚವು ಮೂರು ಪಟ್ಟು ಹೆಚ್ಚಾಗಲಿದೆ.

ಅಮೆರಿಕದಲ್ಲಿ ಐಫೋನ್ ಉತ್ಪಾದಿಸುವ ಯೋಜನೆಯು ಅಪ್ರಾಯೋಗಿಕ ಎಂದು ವೆಡ್‌ಬುಶ್ ಸೆಕ್ಯುರಿಟೀಸ್‌ನ ವಿಶ್ಲೇಷಕ ಡ್ಯಾನಿಯಲ್ ಐವ್ಸ್ ಅಭಿಪ್ರಾಯ ಪಟ್ಟಿದ್ದಾರೆ.

ಚೀನಾ ಅಥವಾ ಭಾರತದಲ್ಲಿ ಒಂದು ಐಫೋನ್



ಉತ್ಪಾದನೆಗೆ ಸುಮಾರು 1,000 ಡಾಲರ್ ವೆಚ್ಚವಾದರೆ, ಅಮೆರಿಕದಲ್ಲಿ ಇದೇ ಫೋನ್‌ನ ಉತ್ಪಾದನಾ ವೆಚ್ಚವು 3,000 ಡಾಲರ್ ಆಗಲಿದೆ. ಒಂದು ವೇಳೆ ಈಗಲೇ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಮುಂದಾದರೂ, 2028ರವರೆಗೆ ಅಮೆರಿಕದಲ್ಲಿ ಮೊದಲ ಐಫೋನ್ ಉತ್ಪಾದಿಸಲು ಸಾಧ್ಯವಿಲ್ಲ ಎಂದು ಐವ್ಸ್ ತಿಳಿಸಿದ್ದಾರೆ.

ಚೀನಾದ ಮೇಲಿನ ಆಮದು ಸುಂಕದ ಕುರಿತು ಆಪಲ್ ಕಂಪನಿಯು ಇದುವರೆಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಮೇ 1ರಂದು ನಡೆಯಲಿರುವ ಆಪಲ್‌ನ ತ್ರೈಮಾಸಿಕ ಸಭೆಯಲ್ಲಿ ಸಿಇಒ ಟಿಮ್ ಕುಕ್ ಅವರು ಈ ವಿಷಯವನ್ನು ಚರ್ಚಿಸುವ ಸಾಧ್ಯತೆಯಿದೆ.

ಚೀನಾದ ಮೇಲಿನ ಸುಂಕದಿಂದ ಆಪಲ್ ಕಂಪನಿಯ ಮೇಲೆ ಗಣನೀಯ ಪರಿಣಾಮ ಆಗಲಿದೆ. ಆಪಲ್‌ನ ಷೇರುಗಳು ಈಗಾಗಲೇ ಶೇ. 15ರಷ್ಟು ಕುಸಿದಿವೆ. ಏಪ್ರಿಲ್ 2ರಂದು ಟ್ರಂಪ್ ಅವರು ಹೆಚ್ಚಿನ ಸುಂಕವನ್ನು ಜಾರಿಗೆ ತಂದ ನಂತರ, ಆಪಲ್‌ನ ಮಾರುಕಟ್ಟೆ ಮೌಲ್ಯವು 500 ಶತಕೋಟಿ ಡಾಲರ್‌ನಷ್ಟು ಕಡಿಮೆಯಾಗಿದೆ.

ಇದೇ ಸುಂಕದ ನೀತಿಯು ಮುಂದುವರೆದರೆ, ಆಪಲ್ ಕಂಪನಿಯು ತನ್ನ ಐಫೋನ್ ಮತ್ತು ಇತರೆ ಉತ್ಪನ್ನಗಳ ಬೆಲೆ ಏರಿಕೆ ಮಾಡಬೇಕಾಗುತ್ತದೆ. ಪ್ರಸ್ತುತ, ಕಂಪನಿಯ ಉತ್ಪಾದನಾ ಘಟಕಗಳು ಚೀನಾ, ಭಾರತ ಮತ್ತು ಇತರ ದೇಶಗಳಲ್ಲಿ ಹರಡಿವೆ.

ಆಪಲ್ ತನ್ನ ಲಾಭಾಂಶವನ್ನು ಕಡಿಮೆ ಮಾಡಿಕೊಂಡು ಬೆಲೆಯನ್ನು ನಿಯಂತ್ರಿಸಲು ಪ್ರಯತ್ನಿಸಬಹುದಾದರೂ, ಸ್ವಲ್ಪ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವುದು ಅನಿವಾರ್ಯವಾಗಲಿದೆ.

ಆಪಲ್ ಕಂಪನಿಯು ಕೇವಲ ಫೋನ್ ಮಾರಾಟದಿಂದಲೇ ಆದಾಯವನ್ನು ಗಳಿಸದೆ, ಸೇವೆಗಳ ಮೂಲಕವೂ ಗಣನೀಯ ಆದಾಯವನ್ನು ಪಡೆಯುತ್ತಿದೆ. ಕಳೆದ ಆರ್ಥಿಕ ವರ್ಷದಲ್ಲಿ, ಆಪಲ್‌ನ ಸೇವೆಗಳು ಮತ್ತು ಇತರ ಮಾರ್ಗಗಳ ಮೂಲಕ 96 ಶತಕೋಟಿ ಡಾಲರ್ ಆದಾಯ ಸಂಪಾದಿಸಲಾಗಿದೆ. ಈ ಆದಾಯದ ಮೇಲೆ ಸುಂಕ ಪರಿಣಾಮ ಬೀರಿಲ್ಲ ಎಂದು ಫಾರೆಸ್ಟರ್ ರಿಸರ್ಚ್‌ನ ವಿಶ್ಲೇಷಕ ದೀಪಾಂಜನ್ ಚಟರ್ಜಿ ತಿಳಿಸಿದ್ದಾರೆ.

ಸದ್ಯಕ್ಕಾದರೂ, ಆಪಲ್ ಕಂಪನಿಯು ಸುಂಕದ ಏರಿಕೆಯನ್ನು ತನ್ನ ಹಣಕಾಸು ಶಕ್ತಿಯಿಂದ ನಿಭಾಯಿಸಬಲ್ಲದು ಎಂದು ಚಟರ್ಜಿ ಹೇಳಿದ್ದಾರೆ.

2028ರ ವೇಳೆಗೆ ಅಮೆರಿಕದಲ್ಲಿ 500 ಶತಕೋಟಿ ಡಾಲರ್ ಹೂಡಿಕೆ ಮಾಡಿ 20,000 ಜನರಿಗೆ ಉದ್ಯೋಗ ನೀಡುವ ಯೋಜನೆಯನ್ನು ಆಪಲ್ ಕಂಪನಿಯು ಕಳೆದ ಫೆಬ್ರವರಿಯಲ್ಲಿ ಘೋಷಿಸಿತ್ತು. ಆದರೆ, ಈ ಹೂಡಿಕೆಯು ಐಫೋನ್ ಉತ್ಪಾದನೆಗೆ ಸಂಬಂಧಿಸಿದ್ದಲ್ಲ, ಬದಲಿಗೆ ಡಾಟಾ ಸೆಂಟರ್‌ಗಳಲ್ಲಿ ಕಂಪ್ಯೂಟರ್ ಸರ್ವರ್‌ಗಳಿಗೆ ಸಂಬಂಧಿಸಿದೆ.

ಅಮೆರಿಕದಲ್ಲಿ ಐಫೋನ್ ಉತ್ಪಾದನೆ ಸಾಧ್ಯ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೊಲಿನ್ ಲೆವಿಟ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆದರೆ, ಐಫೋನ್ ಉತ್ಪಾದನೆಗೆ ಅಗತ್ಯವಾದ ಕೌಶಲ್ಯಪೂರ್ಣ ಮಾನವ ಸಂಪನ್ಮೂಲವು ಅಮೆರಿಕದಲ್ಲಿ ಲಭ್ಯವಿರುವುದು ಅನುಮಾನವಾಗಿದೆ.

2017ರಲ್ಲಿ ಚೀನಾದಲ್ಲಿ ನಡೆದ ಸಮಾವೇಶವೊಂದರಲ್ಲಿ ಮಾತನಾಡಿದ್ದ ಆಪಲ್‌ನ ಸಿಇಒ ಟಿಮ್ ಕುಕ್ ಅವರು, ಅಮೆರಿಕದಲ್ಲಿ ಐಫೋನ್ ಉತ್ಪಾದನೆಗೆ ಅಗತ್ಯವಾದ ಕೌಶಲ್ಯ ಲಭ್ಯವಿಲ್ಲ ಎಂದಿದ್ದರು.

ಐಫೋನ್ ಉತ್ಪಾದನೆಯನ್ನು ಅಮೆರಿಕಕ್ಕೆ ವರ್ಗಾಯಿಸಲು ಡೊನಾಲ್ಡ್ ಟ್ರಂಪ್ ಅವರು ತಮ್ಮ ಮೊದಲ ಅಧಿಕಾರವಧಿಯಲ್ಲಿ ಆಪಲ್ ಮೇಲೆ ಒತ್ತಡ ಹೇರಿದ್ದರು. ಆದರೆ, ಅಂತಿಮವಾಗಿ ಚೀನಾದಿಂದ ಆಮದಾಗುವ ಸರಕುಗಳಿಗೆ ಸುಂಕ ವಿನಾಯಿತಿ ನೀಡಲಾಗಿತ್ತು.

ನಂತರ, ಆಪಲ್ ತನ್ನ ಉತ್ಪಾದನಾ ಘಟಕಗಳನ್ನು ಭಾರತ ಮತ್ತು ವಿಯೆಟ್ನಾಂನಲ್ಲೂ ಸ್ಥಾಪಿಸಿತು. ಆದರೆ, ಅಮೆರಿಕದಲ್ಲಿ ಇಂತಹ ಘಟಕಗಳನ್ನು ತೆರೆಯಲು ಇನ್ನೂ ಮುಂದಾಗಿಲ್ಲ.

# ಫೇಲ್ ಆದ್ರೂ ಸಿಇಟಿ ಅವಕಾಶ

**(1ನೇ ಪುಟದಿಂದ)** ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ, ಹೊರನಾಡು ಕನ್ನಡಿಗರಿಗೆ ಏಪ್ರಿಲ್ 15ರಂದು ಕನ್ನಡ ಹಾಗೂ 16 ಮತ್ತು 17ರಂದು ವಿಜ್ಞಾನ ವಿಷಯಗಳ ಸಿಇಟಿ ನಡೆಯುಲಿದ್ದು, ಪ್ರಾಧಿಕಾರ ಸಕಲ ತಯಾರಿ ನಡೆಸಿದೆ ಎಂದು ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಮೊದಲನೇ ಪರೀಕ್ಷೆಯಲ್ಲಿ ಅಂಕ ಕಡಿಮೆ ಬಂದಾಗ್ಯೂ ಎರಡು ಮತ್ತು ಮೂರನೇ ಪರೀಕ್ಷೆ ಬರೆಯುವ ಅವಕಾಶವಿದ್ದು, ಫಲಿತಾಂಶ ಉತ್ತಮ ಪಡಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಪಿಯುಸಿ 3ನೇ ಪರೀಕ್ಷೆಯಲ್ಲಿ ಅರ್ಹರಾದವರೂ ಸಿಇಟಿ ರ್‍ಯಾಂಕ್ ಪಡೆದು, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಪಡೆಯಬಹುದಾಗಿದೆ. ಆದರೆ, ಸಿಇಟಿ ಪರೀಕ್ಷೆ ಬರೆಯದಿರುವವರನ್ನು ರ್‍ಯಾಂಕಿಗೆ ಪರಿಗಣಿಸಲಾಗದು.

ಕಳೆದ ವರ್ಷವೂ 3ನೇ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅನೇಕರಿಗೆ ರ್‍ಯಾಂಕ್ ನೀಡಿ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆದ್ದರಿಂದ ಸಿಇಟಿ ಪರೀಕ್ಷೆ ತಪ್ಪಿಸಿಕೊಳ್ಳದಂತೆ ಸಲಹೆ ನೀಡಿದ್ದಾರೆ.

ಈ ವರ್ಷ 3.3 ಲಕ್ಷ ಅಭ್ಯರ್ಥಿಗಳು ಸಿಇಟಿ ಬರೆಯಲು ಶುಲ್ಕ ಪಾವತಿಸಿದ್ದು, ಇದುವರೆಗೆ 2.85 ಲಕ್ಷ ಮಂದಿ ತಮ್ಮ ಪ್ರವೇಶ ಪತ್ರ ಡೌನ್ಲೋಡ್ ಮಾಡಿಕೊಂಡಿದ್ದು, ಇನ್ನೂ ಸುಮಾರು 45 ಸಾವಿರ ಮಂದಿ ಡೌನ್ ಲೋಡ್ ಮಾಡಿಕೊಳ್ಳಬೇಕಿದೆ ಎಂದವರು ಹೇಳಿದರು.

# ಜೂಜು, ಬೆಟ್ಟಿಂಗ್ ದಂಧೆಯ ದುಷ್ಪರಿಣಾಮ ಬಗ್ಗೆ ಜಾಗೃತಿ

## ದವನ್ ಕಾಲೇಜಿನ ತೃತೀಯ ಬಿಕಾಂ ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ

ದಾವಣಗೆರೆ, ಏ.12- ಇಲ್ಲಿನ ದವನ್ ಕಾಲೇಜಿನ ಸ್ಫೂರ್ತಿ ಯುವಜನ ಉತ್ಸವ - 2025 ಅಂಗವಾಗಿ ದವನ್ ಕಾಲೇಜಿನ ತೃತೀಯ ಬಿ.ಕಾಂ ವಿದ್ಯಾರ್ಥಿಗಳು ಜೂಜು ಮತ್ತು ಬೆಟ್ಟಿಂಗ್ ದಂಧೆಯ ದುಷ್ಪರಿಣಾಮಗಳ ಬಗ್ಗೆ ನಾಟಕ ಪ್ರದರ್ಶನ ಮೂಲಕ ಜನಜಾಗೃತಿ ಮೂಡಿಸಿದರು.

ನುಕಡ್ ನಾಟಕದ ಉಸ್ತುವಾರಿ ಕೊಟ್ರಪ್ಪ.ಕೆ ಮತ್ತು ಪ್ರಿಯಾಂಕ.ವಿ ಹಾಗೂ ಬಿ.ಕಾಂ ವಿಭಾಗದ ಮುಖ್ಯಸ್ಥರಾದ ಚಂದನ್ ಜಿ.ಬಿ. ಮಾರ್ಗದರ್ಶನದಲ್ಲಿ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ



ದೇವಸ್ಥಾನದ ಮುಂಭಾಗ ನಿನ್ನೆ ಜೂಜು ಮತ್ತು ಬೆಟ್ಟಿಂಗ್‌ನಿಂದ ಆಗುವ ದುಷ್ಪರಿಣಾಮ ಬಗ್ಗೆ ಮುಖ್ಯವಾಗಿ ಯುವ ಜನರಲ್ಲಿ ಜಾಗೃತಿ ಮೂಡಿಸಲಾಯಿತು.

ನಾಟಕದ ಪಾತ್ರಧಾರಿಗಳಾದ ತೃತೀಯ ಬಿ.ಕಾಂ ವಿದ್ಯಾರ್ಥಿಗಳಾದ ತರುಣ್ ಕುಮಾರ್, ಹಾಲಶ್ರೀ, ಶಾಂತಲಾ, ಭೂಮಿಕಾ, ಯತೀಶ್ ಕೆ.ಎನ್, ತೇಜಸ್.ಕೆ, ಸಂಜಯ್ ಎಂ.ಎಸ್, ವಿನೋದ್ ಸಿ.ಎನ್, ಕಾರ್ತಿಕ್ ಹೆಚ್.ಎಂ, ಸಂಕೇತ್ ಎಸ್ ಮತ್ತು ಪೂಜಾದೇವಿ ಎಲ್ಲರ ಗಮನ ಸೆಳೆದರು.

# ಒಬಿಸಿ ಮೀಸಲಾತಿ ಹೆಚ್ಚಿಸಲು ಶಿಫಾರಸ್ಸು

**(1ನೇ ಪುಟದಿಂದ)** ವನ್ನು ಈಗ ಇರುವಂತಹ ಶೇ 4 ರಿಂದ ಶೇ 8ಕ್ಕೆ ಏರಿಸಬೇಕು ಎಂದು ಶಿಫಾರಸ್ಸಿನಲ್ಲಿ ತಿಳಿಸಲಾಗಿದೆ.

ಲಿಂಗಾಯತ (66 ಲಕ್ಷ) ಹಾಗೂ ಅದರ ಉಪ ಜಾತಿಗಳ ಒಟ್ಟು ಜನ ಸಂಖ್ಯೆ 81 ಲಕ್ಷ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಈಗ ಇರುವ ಶೇಕಡ 5 ರಿಂದ ಶೇ 8ಕ್ಕೆ ಏರಿಸಬೇಕು. ಒಕ್ಕಲಿಗ (61.50 ಲಕ್ಷ) ಮತ್ತು ಅದರ ಉಪ ಜಾತಿಗಳ ಒಟ್ಟು ಜನಸಂಖ್ಯೆ 72 ಲಕ್ಷ. ಈಗ ಇರುವ ಮೀಸಲಾತಿ ಶೇ 4 ರಿಂದ ಶೇ 7ಕ್ಕೆ ಏರಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ.

ಕಾನೂನು ಪ್ರಕಾರ ಮೀಸಲಾತಿ ಪ್ರಮಾಣ ಶೇ. 50 ಮೀರುವಂತೆ ಇಲ್ಲ. ಆಯೋಗದ ಶಿಫಾರಸ್ಸು ಪ್ರಕಾರ ಮೀಸಲಾತಿ ಜಾರಿಗೊಳಿಸಿದರೆ, ಜಾತಿ ಮೀಸಲಾತಿ ಪ್ರಮಾಣವೇ ಶೇ. 75.1 ಆಗಲಿದೆ. ಆಗ ಸಾಮಾನ್ಯ ವರ್ಗದವರಿಗೆ ಶೇ. 24.9 ಮಾತ್ರ ಉಳಿಯಲಿದೆ.

ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10 ರ ಮೀಸಲಾತಿ ಕಲ್ಪಿಸಿದೆ. ಅದನ್ನೂ ಜಾರಿಗೆ ತಂದಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ.85.1ಕ್ಕೆ ಹೆಚ್ಚಳವಾಗಿ, ಸಾಮಾನ್ಯ ವರ್ಗಕ್ಕೆ ಶೇ.14.9ರಷ್ಟು ಮಾತ್ರ ಉಳಿಯಲಿದೆ. ಮೀಸಲಾತಿ ಹೆಚ್ಚಿಸಬೇಕಾದಲ್ಲಿ, ಕೇಂದ್ರ ಸರ್ಕಾರ ಸಂವಿಧಾನದ ಒಂಭತ್ತನೇ ಪರಿಚ್ಛೇದಕ್ಕೆ ತಿದ್ದುಪಡಿ ತರಬೇಕಿದೆ.

# ಶ್ರೀ ಚರಂತಪ್ಪಜ್ಜ ಮಹಾಸ್ವಾಮೀಜಿ ಸ್ಮರಣೆ

ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗದ್ದಿಕೆರೆ ಗ್ರಾಮದಲ್ಲಿ ಕ್ರಿ.ಶ.15ನೇ ಶತಮಾನದಲ್ಲಿ ಮಹಾಮಹಿಮ ದೊಡ್ಡಬಸವೇಶ್ವರರು ಜೀವಿಸಿದ್ದರು. ಜೀವ ಸಮಾಧಿಗೆ ಹೋಗುವಾಗ ಭಕ್ತರಿಗೆ 'ಸಕಲ ಜೀವಿಗಳ ಉದ್ಧಾರಕ್ಕಾಗಿ ಮತ್ತೆ ಅವತರಿಸಿ ಬರುತ್ತೇನೆ' ಎಂದು ಮಾತು ಕೊಟ್ಟಿದ್ದ ಮಹಾ ಮಹಿಮಾ ಪುರುಷರು. ಶ್ರೀ ಗುರು ಕೊಟ್ಟೂರೇಶ್ವರರ ಸಮಕಾಲಿನರು.



ದೊಡ್ಡಬಸವೇಶ್ವರರು ಕೊಟ್ಟ ಮಾತಿನಂತೆ ಪೂಜ್ಯ ಚರಂತಪ್ಪಯ್ಯ ಮಹಾ ಸ್ವಾಮಿಗಳ ಸ್ವರೂಪದಿ ಅವತರಿಸಿ, ಪೂರ್ಣ ಚೈತನ್ಯವೇ ಅವರಾಗಿದ್ದರು. ನಂತರ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಂದಿಪುರವನ್ನು ಪುಣ್ಯಕ್ಷೇತ್ರವನ್ನಾಗಿಸಿ, ಭಕ್ತೋದ್ಧಾರ ಕಾರ್ಯವನ್ನು ನಡೆಸಿಕೊಂಡು ಬಂದಿದ್ದಾರೆ.

ಚರಂತಪ್ಪಜ್ಜನವರು ಆ ಭಾಗದ ಎಲ್ಲರ ಮನೆಯ ಗುರುವಾಗಿದ್ದಾರೆ, ನಡೆದಾಡುವ ದೇವರೇ ಆಗಿದ್ದಾರೆ. ಕರ್ನಾಟಕದ ಎಲ್ಲಾ ಭಾಗದಲ್ಲೂ ಇವರ ಶಿಷ್ಯಂದಿರು, ಭಕ್ತರು ಇದ್ದಾರೆ. ತಮ್ಮ ಶಿವಯೋಗ ಸಾಧನೆಯಿಂದ ವಾಕ್ ಸಿದ್ಧಿಯನ್ನು ಪಡೆದವರು ಚರಂತಪ್ಪಜ್ಜನವರು. ತಮ್ಮ ವಾಕ್ ಸಿದ್ಧಿಯ ಪ್ರಭಾವದಿಂದ ಜನರ ಮನೆ ಮನಗಳಲ್ಲಿ ನಡೆದಾಡುವ ಗುರುವಾಗಿ, ದೇವರಾಗಿ ನೆಲೆಸಿದ್ದಾರೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಅನೇಕ ಕಾಯಿಲೆಗಳಿಂದ ನರಳಿ ಬಂದ ಭಕ್ತರಿಗೆ ಭವರೋಗ ವೈದ್ಯರಾಗಿ ತಮ್ಮ ಶ್ರೀವಾಣಿಯ ಮೂಲಕ ಉತ್ತಮ ಆಹಾರವೇ ದಿವ್ಯ ಔಷಧಿ ಎನ್ನುವಂತೆ ಆಹಾರದ ಕ್ರಮವನ್ನು ತಿಳಿಸಿ ಆರೋಗ್ಯವಂತರನ್ನಾಗಿಸುತ್ತಿದ್ದರು.

ಭಕ್ತರು ತಮ್ಮ ಮಹತ್ವದ ಕಾರ್ಯಗಳನ್ನು ಆರಂಭಿಸಬೇಕಾದರೆ ಚರಂತಪ್ಪಜ್ಜ ಸ್ವಾಮಿಗಳವರ ಬಳಿ ಬಂದು ಆಶೀರ್ವಾದ ಪಡೆದುಕೊಳ್ಳುತ್ತಿದ್ದರು. ಪರಮಪೂಜ್ಯರು 2005ರಲ್ಲಿ ಲಿಂಗೈಕ್ಯರಾದ ನಂತರ ಭಕ್ತರು ಕರ್ತೃ ಗದ್ದುಗೆಯ ದರ್ಶನ ಪಡೆದು ತಮ್ಮ ಮನದ ಬೇಡಿಕೆಗಳನ್ನು ಅಜ್ಜನವರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಬಂದಿದ್ದಾರೆ.

ಈಗ ಅವರ ಚಿರಂಜೀವಿ ಡಾ.ಮಹೇಶ್ವರ ಸ್ವಾಮೀಜಿಯವರು ಪೂಜ್ಯ ಚರಂತಪ್ಪಯ್ಯನವರ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿಕೊಂಡು ಬರುವುದರ ಜೊತೆಗೆ ಗೋಶಾಲೆ, ಉಚಿತ ಆದರ್ಶ ಸಾಮೂಹಿಕ ವಿವಾಹ, ಶೈಕ್ಷಣಿಕ, ಕೃಷಿ ಕ್ರಾಂತಿಯಂತಹ ಅಭೂತಪೂರ್ವ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಸಾವಯವ ಕೃಷಿಗೆ ಒತ್ತು ನೀಡಿ, ಪ್ರತಿ ತಿಂಗಳು ರೈತರಿಗೆ ಸಾವಯವ ಕೃಷಿಯ ತರಬೇತಿ ನೀಡುತ್ತಾ ಬಂದಿದ್ದಾರೆ. ಧಾರ್ಮಿಕ ಕ್ರಿಯಾ ಚಟುವಟಿಕೆಗಳೊಂದಿಗೆ, ಪ್ರತಿದಿನವೂ ಕೃಷಿ ಕಾಯಕ ಚಟುವಟಿಕೆಯಲ್ಲಿ ಇರುವುದು ; ಶ್ರೀಗಳಲ್ಲಿರುವ ಕೃಷಿ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ಮಠಾಧೀಶರ ಪರಿಷತ್ತಿನೊಂದಿಗೆ ಅನೇಕ ಕಾರ್ಯಕ್ರಮಗಳು ಜರುಗುತ್ತಿವೆ. ಶ್ರೀ ಮಠಕ್ಕೆ ಬಂದಂತಹ ಭಕ್ತಾದಿಗಳಿಗೆ ಪ್ರತಿನಿತ್ಯವೂ ಪ್ರಸಾದದ ವ್ಯವಸ್ಥೆಯನ್ನು, ವಸತಿ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ.

ಪುಣ್ಯಕ್ಷೇತ್ರದಲ್ಲಿ ಪ್ರತಿವರ್ಷ ನಡೆಸುವ ಜಾತ್ರೆ, ರಥೋತ್ಸವ, ಕಾರ್ತಿಕೋತ್ಸವಗಳಲ್ಲಿ ; ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ; ಅನೇಕ ಸಮಾವೇಶಗಳನ್ನು ಶಿಬಿರಗಳನ್ನ ಮಾಡುತ್ತಾರೆ.

ಸಾಧಕರಿಗೆ ಪ್ರಶಸ್ತಿ ಗೌರವವನ್ನು ಕೊಟ್ಟು ಪುರಸ್ಕರಿಸುತ್ತಾರೆ. ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯ ಶಿಬಿರವನ್ನು ಹಮ್ಮಿಕೊಳ್ಳುತ್ತಾರೆ. 'ಚರಂತಪ್ಪಜ್ಜ ಸ್ವಾಮಿಗಳು ವಾಕ್ ಸಿದ್ಧಿ ಪುರುಷರು, ಮಹೇಶ್ವರ ಸ್ವಾಮಿಗಳು ಕೃಷಿ ಕಾಯಕಯೋಗಿ ಪುರುಷರು' ಎಂದು ಭಕ್ತರು ಕರೆಯುತ್ತಾರೆ.

ಚರಂತಪ್ಪಜ್ಜ ಸ್ವಾಮಿಗಳ ಪ್ರಭಾವಕ್ಕೆ ಒಳಗಾದ ಭಕ್ತರು ನಾಡಿನ ಎಲ್ಲಾ ಕಡೆ ಇದ್ದಾರೆ. ನಾಡಿನ ಬೇರೆ ಬೇರೆ ನಗರಗಳಲ್ಲಿ ; ಪ್ರತಿವರ್ಷ ಅಲ್ಲಿನ ಭಕ್ತರು ಶ್ರೀಗಳ ಸ್ಮರಣೋತ್ಸವ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ನಂದಿಪುರ ಶ್ರೀಮಠವು ಪ್ರತಿವರ್ಷ ಸಾಧಕರಿಗೆ ' ಚರಂತಾರ್ಯ ಶ್ರೀ ' ಪ್ರಶಸ್ತಿ ನೀಡಿ ಗೌರವಿಸುತ್ತದೆ.

ಈ ವರ್ಷ ದಾವಣಗೆರೆಯ ಭಕ್ತ ವೃಂದವು 21 ನೇ ಸಂಸ್ಮರಣೆ ಕಾರ್ಯಕ್ರಮವನ್ನು ನಮ್ಮ ನಗರದಲ್ಲಿಯೂ ನಡೆಸಬೇಕೆಂದು ನಿರ್ಧರಿಸಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಶ್ರೀಶೈಲ ಮಠದಲ್ಲಿ ಇಂದು ಸಂಜೆ 5 ಗಂಟೆಗೆ ಚರಂತಪ್ಪಜ್ಜ ಸ್ವಾಮಿಗಳವರ 21 ಸ್ಮರಣೋತ್ಸವ ಕಾರ್ಯಕ್ರಮವು ನಡೆಯಲಿದೆ.

ಕಾರ್ಯಕ್ರಮಕ್ಕೂ ಮೊದಲು ಸಂಜೆ 4 ಗಂಟೆಯಿಂದ ಅರಿವು ಬಳಗದಿಂದ ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಯುವುದು. ಬೆಂಗಳೂರಿನ ಸಂಗೀತ ಕಲಾವಿದರಾದ ದೇವೇಂದ್ರ ಕುಮಾರ್ ಪತ್ತಾರ್, ದಾವಣಗೆರೆಯ ಗಾನ ಗಾರುಡಿಗ ಕಲ್ಬರಲ್ ಅಕಾಡೆಮಿ ನೃತ್ಯ ಸಂಗೀತ ಪಾಠಶಾಲೆಯವರಿಂದ ಸಂಗೀತ ಕಾರ್ಯಕ್ರಮ ಮತ್ತು ಕೋಗಳಿ ಕೊಟ್ರೇಶ್ ಅವರಿಂದ ಹಾಸ್ಯ ಕಾರ್ಯಕ್ರಮ ನಡೆಯುವುದು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಾವೆಲ್ಲಾ ಭಾಗವಹಿಸಿ, ಗುರುಗಳ ಕೃಪೆಗೆ ಪಾತ್ರರಾಗೋಣ.

**- ಶಿವಪ್ರಸಾದ ಕರ್ಜಗಿ**
ಸಾಹಿತಿಗಳು, ದಾವಣಗೆರೆ.

# ನಗರದಲ್ಲಿ ಇಂದು ಚರಂತಪ್ಪಜ್ಜ ಶ್ರೀಗಳ ಸ್ಮರಣೋತ್ಸವ

ದಾವಣಗೆರೆ, ಏ. 12- ಹರಪನಹಳ್ಳಿ ತಾಲ್ಲೂಕಿನ ನಂದಿಪುರ ಪುಣ್ಯಕ್ಷೇತ್ರದ ಶ್ರೀ ಬಸವೇಶ್ವರ ಸೇವಾ ಸಮಿತಿ ವತಿಯಿಂದ ನಾಳೆ ದಿನಾಂಕ 13 ರಂದು ಭಾನುವಾರ ಸಂಜೆ 5 ಗಂಟೆಗೆ ನಗರದ ಶ್ರೀಶೈಲ ಮಠದ ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರದಲ್ಲಿ ನಂದಿಪುರ ಶ್ರೀ ಗುರು ಚರಂತಪ್ಪಜ್ಜ ಸ್ವಾಮಿಗಳ 21 ನೇ ಸ್ಮರಣೋತ್ಸವ ಹಾಗೂ ಚರಂತಾರ್ಯ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಮಿತಿ ಸಂಚಾಲಕ ಗುರು ಬಸವರಾಜ್ ನಂದಿಪುರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬಿಳಿಕೆಯ ಹಿರೇಮಠದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕುಂಚೂರಿನ ಶ್ರೀ ಸವಿತಾ ಪೀಠ ಮಹಾಸಂಸ್ಥಾನ ಶ್ರೀ ಸವಿತಾನಂದ ಸ್ವಾಮೀಜಿ,ನಂದಿಪುರ ಪುಣ್ಯಕ್ಷೇತ್ರದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಿವ ಎಂ.ಪಿ. ರೇಣುಕಾಚಾರ್ಯ, ಎಸ್ಪಿ ಉಮಾ ಪ್ರಶಾಂತ್ ಮತ್ತಿತರರು ಆಗಮಿಸಲಿದ್ದಾರೆ.

ಹಂಪಿ ಕನ್ನಡ ವಿವಿ ಸಹಾಯಕ ಕುಲಸಚಿವ ಡಾ. ಶಿವಪ್ರಕಾಶ್ ಅವರು ಹೆಚ್.ಎಂ. ಗುರು ಬಸವರಾಜಯ್ಯ ಸಂಪಾದಿತ 'ಭವ್ಯ ಬೆಳಕು( ನಡೆದಾಡುವ ದೇವರು ಭಾಗ-1 ಮತ್ತು ಭಾಗ-2) ವಿಶೇಷ ಲೇಖನಗಳ ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಎಸ್‌ಜೆವಿಪಿ ಮಹಾವಿದ್ಯಾಲಯದ ಪ್ರೊ. ಹೆಚ್.ಎ. ಭಿಕ್ಷಾ ವರ್ತಿಮಠ ಗ್ರಂಥಾವಲೋಕನ ಮಾಡಲಿದ್ದಾರೆ. ಗಂಗಾವತಿ ಸಾಹಿತಿ ಎಸ್.ವಿ. ಪಾಟೀಲ್ ಗುಂಡೂರು ಮಾತನಾಡುವರು.

ವಿನುತಾ ರವಿ, ಶಿವಪ್ರಸಾದ್, ರಾಜು ವೀರಣ್ಣ, ಧನಂಜಯ, ಸಿ.ಜಯರಾಜ್ ಉಪಸ್ಥಿತರಿದ್ದರು.



# ನಗರಕ್ಕೆ ಇಂದು ಶಿರಡಿ ಸಾಯಿಬಾಬಾ ಪಾದುಕೆ ಆಗಮನ : ನಾಳೆ ದರ್ಶನ





ದಾವಣಗೆರೆ, ಏ. 12- ನಾಳೆ ದಿನಾಂಕ 13 ರ ಭಾನುವಾರ ಸಂಜೆ 6.30ಕ್ಕೆ ಸುವರ್ಣ ರಥದಲ್ಲಿ ಶಿರಡಿ ಸಾಯಿ ಬಾಬಾರವರ ಮೂರ್ತಿ ಹಾಗೂ ಪಾದಕೆಗಳು ನಗರಕ್ಕೆ ಆಗಮಿಸಲಿದ್ದು, ಜಯದೇವ ವೃತ್ತದಿಂದ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಶಿರಡಿ ಸಾಯಿಬಾಬಾ ಮಂದಿರ ದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಶಿರಡಿ ಸಾಯಿಬಾಬಾ ಮಂದಿರದ ಟ್ರಸ್ಟಿ ಪರಶುರಾಮ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಯಿಬಾಬಾ ಅವರು ತಮ್ಮ ಜೀವಿತ ಅವಧಿಯಲ್ಲಿ ಧರಿಸುತ್ತಿದ್ದ ಪಾದರಕ್ಷೆಗಳು ನಾಳೆ ಭಾನುವಾರ ನಗರಕ್ಕೆ ಆಗಮಿಸಲಿದ್ದು, ದಿನಾಂಕ 14 ರ ಸೋಮವಾರ ಮತ್ತು 15 ರ ಮಂಗಳವಾರ ಬೆಳಿಗ್ಗೆ 8 ರಿಂದ ರಾತ್ರಿ 10 ರವರೆಗೆ ಎಂಸಿಸಿ 'ಎ' ಬ್ಲಾಕ್‌ನಲ್ಲಿನ ಸಾಯಿ ಮಂದಿರದಲ್ಲಿ ಪಾದುಕೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ. ಎರಡು ದಿನಗಳೂ ಮಧ್ಯಾಹ್ನ 12 ಕ್ಕೆ ಹಾಗೂ ಸಂಜೆ 6.30 ಕ್ಕೆ ಆರತಿ ಹಾಗೂ ದಾಸೋಹ ವ್ಯವಸ್ಥೆ ಮಾಡಲಾಗಿದೆ.

ಪಾದುಕೆ ದರ್ಶನಕ್ಕೆ ಸಕಲ ಸಿದ್ಧತೆಮಾಡಿಕೊಳ್ಳಲಾಗಿದ್ದು, ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಎಸ್ಪಿ ಉಮಾ ಪ್ರಶಾಂತ್ ಅವರು ಮಾಡಿದ್ದಾರೆ. ಶಿರಡಿಯಿಂದ ನಾಲ್ವರು ಅರ್ಚಕರು ಆಗಮಿಸಿ, ವಿಶೇಷ ಪೂಜಾ ವಿಧಿ, ವಿಧಾನಗಳನ್ನು ನೆರವೇರಿಸಿಕೊಡಲಿದ್ದಾರೆ ಎಂದು ಅವರು ತಿಳಿಸಿದರು.

ಪಾದುಕೆ ಮೆರವಣಿಗೆಗೆ ನಾಡಿನ ಹೆಸರಾಂತ ಕಲಾ ತಂಡಗಳನ್ನು ಆಹ್ವಾನಿಸಲಾಗಿದ್ದು, ಸುಮಾರು 30 ರಿಂದ 40 ಸಾವಿರ ಭಕ್ತರು ಪಾದುಕೆ ವೀಕ್ಷಣೆ ಮಾಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಿರಡಿ ಸಾಯಿ ಮಂದಿರದ ಟ್ರಸ್ಟಿಗಳು ಹಾಗೂ ಪಾದುಕಾ ಸೇವಾ ಸಮಿತಿ ಪದಾಧಿಕಾರಿಗಳಾದ ಎಂ. ಶಿವಪ್ಪ, ಡಾ. ಹೆಚ್.ಎಸ್. ಜಾಧವ್, ಗಿರೀಶ್, ಬಸವರಾಜ್ ಗೌಡ್ರು, ಸಾಯಿ ದೀಪು, ಮಧುಸೂದನ್, ರಾಜಶೇಖರ್, ಪ್ರಭಾಕರ್, ವಾಸುದೇವ ರಾಯ್ಕರ್, ವೀರಣ್ಣ, ನಿಖಿಲ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿಕಾಸ ತರಂಗಿಣಿಯಿಂದ ಮಜ್ಜಿಗೆ ವಿತರಣೆ

ವಿಕಾಸ ತರಂಗಿಣಿ ವತಿಯಿಂದ 30ನೇ ವರ್ಷದ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮವು ಮಹಾನಗರ ಪಾಲಿಕೆ ಮುಂಭಾಗದಲ್ಲಿ ನಡೆಯುತ್ತಿದ್ದು, ಗೌಡ್ರ ಹನುಮಂತಪ್ಪ ಶ್ರೀಮತಿ ರುದ್ರಮ್ಮ ಶಾಮನೂರು ಕುಟುಂಬವರ್ಗದವರು ಮಜ್ಜಿಗೆ ದಾನಿಗಳಾಗಿದ್ದಾರೆ. ಮಜ್ಜಿಗೆ ದಾನಿಗಳಾಗಲಿಚ್ಛಿಸುವವರು 94483 24358 ಈ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ವಿಕಾಸ ತರಂಗಿಣಿ ಸಂಚಾಲಕ ಬಿ. ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

## ಮಹಿಳಾ ಆಯೋಗದ ಅಧ್ಯಕ್ಷರಿಂದ ಅಹವಾಲು ಸ್ವೀಕಾರ

ದಾವಣಗೆರೆ, ಏ. 12- ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮಿ ಚೌದರಿ ಅವರು ನಾಡಿದ್ದು ದಿನಾಂಕ 14 ರಿಂದ 17 ರವರೆಗೆ ನಾಲ್ಕು ದಿನಗಳ ಕಾಲ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಇದೇ ದಿನಾಂಕ 16 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಎಸ್‌ಹೆಚ್‌ಡಬ್ಲ್ಯೂ ಜಿಲ್ಲೆಯಲ್ಲಿ ಜಾರಿಯಾದ ಬಗ್ಗೆ ಹಾಗೂ ಪ್ರಕರಣಗಳು ದಾಖಲಾದ ಬಗ್ಗೆ, ಅಂಕಿ ಅಂಶಗಳೊಂದಿಗೆ ಚರ್ಚೆ, ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಸ್ಥಳೀಯ ಹಾಗೂ ಅಂತರಿಕ ದೂರು ಸಮಿತಿ ಬಗ್ಗೆ ಪರಿಶೀಲನೆ, ಕಾಲೇಜು ವಿದ್ಯಾರ್ಥಿನಿಯರು ಮತ್ತು ಮಹಿಳೆಯರ ಸುರಕ್ಷತೆ ಕುರಿತಂತೆ ಮಹಿಳಾ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 4 ಗಂಟೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.


## ನಾಯಿ ಕಳೆದಿದೆ



'ಟಾಫಿ' ಎಂಬ ಹೆಸರಿನ ನಾಯಿ ಕಳೆದ ಮೂರು ದಿನಗಳಿಂದ ಬಾಪೂಜಿ ಆಸ್ಪತ್ರೆ ಹತ್ತಿರದಲ್ಲಿ ಕಾಣೆಯಾಗಿದೆ. ಟಾಫಿ ನೀಲಿ ಬಣ್ಣದ ಕಾಲರ್ ಬೆಲ್ಟ್ ಧರಿಸಿರುವನು, ಅದರಲ್ಲಿ ಸಣ್ಣ ಗಂಟೆ ಕೂಡ ಜೋಡಿಸಲಾಗಿದೆ. ಕಿವಿಯ ತುದಿಗಳನ್ನು ಕತ್ತರಿಸಲಾಗಿದ್ದು, ಸ್ಪಷ್ಟವಾಗಿ ಗುರುತಿಸಬಹುದು. ಟಾಫಿ ಬಗ್ಗೆ ಮಾಹಿತಿ ಸಿಕ್ಕರೆ ದಯವಿಟ್ಟು **70195 21545, 63628 47441** ಸಂಖ್ಯೆಗೆ ಸಂಪರ್ಕಿಸಲು ಕೋರಿದೆ.

ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು.



Rashtrotthana Parishat ®

## RASHTROTTHANA VIDYA KENDRA C.B.S.E.

Affiliation No: 830511,Opp ESI Hospital, Nittuvalli, Davanagere.

Website: dvg.rvkcbse.in, Email: rvkdvg@rvkcbse.in.

Admission Open for the academic year 2025-26

**For Pre-Primary to Grade X**



I & II PUC Admissions are in Progress

- For I PUC PCMB / PCMCS
- Long term coaching for NEET/JEE Aspirants
- Separate Hostel Facility for Boys & Girls
- Scholarship to Meritorious Students upto 100%
- Integrated Course with K-CET, NEET & JEE

**Contact for Admission:86605-76847, 87926-27879, 08192-219068**

### ಬೇಕಾಗಿದ್ದಾರೆ

| ಹುದ್ದೆಗಳು | ಸ್ಥಾನಗಳು | ಅನುಭವ ಮತ್ತು ಅವಧಿ |
|---|---|---|
| ಪಿಯುಸಿ ವಾರ್ಡ್‌ನ್‌ಗಳು (ಪುರುಷ & ಮಹಿಳೆ) | 04 | ಸಿಬಿಎಸ್‌ಸಿ ಶಾಲೆಯಲ್ಲಿ ಕನಿಷ್ಠ 3 ವರ್ಷ ಅನುಭವ |
| ಬಸ್ ಚಾಲಕರು | 05 | ಕನಿಷ್ಠ 5 ವರ್ಷ ಅನುಭವ ಮತ್ತು HMV ಲೈಸೆನ್ಸ್ &Badge ಹೊಂದಿರಬೇಕು |
| ಕ್ಲೀನಿಂಗ್ ಸಿಬ್ಬಂಧಿ (ಆಯಾ ಮಹಿಳೆ) | 10 | ಕನಿಷ್ಠ ಎಸ್‌ಎಸ್‌ಎಲ್‌ಸಿ ಪಾಸ್ |
| ಸುರಕ್ಷತಾ ಸಿಬ್ಬಂದಿ (ಪುರುಷ/ಮಹಿಳೆ) | 05 | ಕನಿಷ್ಠ ಎಸ್‌ಎಸ್‌ಎಲ್‌ಸಿ ಪಾಸ್ |
| ತೋಟಗಾರರು | 02 | ಕನಿಷ್ಠ 1 ವರ್ಷ ಅನುಭವ |

ಹೆಚ್ಚಿನ ಮಾಹಿತಿಗಾಗಿ:
08192–258255, 96114 14403
98444 33059, 97013 78406

### Wanted Teachers

| Designation | Vacancies | Experience |
|---|---|---|
| Head Mistress for Pre-Primary | 02 | Min 3 Yrs at a CBSE School |
| TGT: Kan, Hin, Eng, Maths, Social, CBZ & Physics | 02 | Min 3 Yrs at secondary level ( Classes 8 to 10) |
| PRT: Sankrit, Eng, Hin, Sci, Social & Maths. | 04 | Min 3 Yrs at Middle Stage ( Classes 1 to 7) |
| NTT- Pre-Primary | 06 | Min 3 Yrs at a CBSE School |
| Physical Education & yoga Teacher | 03 | Min 3 Yrs at a CBSE School |
| Computer, AI & IT Teacher | 02 | Min 3 Yrs at a CBSE School |
| Drawing, Vocal, Keyboard & Theatre | 01 | Min 2 Yrs at a CBSE School |
| Student Counsellors | 02 | Min 3 Yrs at a CBSE School |
| Academic Co-ordinator | 04 | Min 5 Yrs at a CBSE School |
| Administrator | 02 | Min 3 Yrs at a CBSE School |
| HR Manager | 01 | Min 3 Yrs at a CBSE School |

Apply before 20-04-2025 to : rvkdvg@rvkcbse.in



Sapthagiri Trust (R.)

## SAPTHAGIRI PU COLLEGE

CHIGATERI LAYOUT, KUNDUWADA ROAD, DAVANGERE-6.

### WANTED

| Post | Qualification | Experience | Vacancy |
|---|---|---|---|
| Physics Lecturer | M.Sc., B.Ed., | 0-02 years | 02 |
| Chemistry Lecturer | M.Sc., B.Ed., | 0-02 years | 02 |
| Maths Lecturer | M.Sc., B.Ed., | 0-15 years | 03 |
| Biology Lecturer | M.Sc., B.Ed., | 0-15 years | 02 |
| Computer Science Lecturer | M.Sc.,(cs), B.Tech., | 0-05 years | 01 |
| Science Teacher | M.Sc., B.Ed., | 0-10 years | 01 |
| Physical Director | BPEd., MPEd., | 0-15 years | 02 |
| Warden | B.Com., | 0-15 years | 05 |
| Bus Drivers | - | 0-10 years | 02 |
| Marketing | MBA | 0-05 years | 02 |
| Tele Calling | B.Com., | 0-05 years | 02 |

WALK IN INTERVIEW 7 DAYS FROM THE DATE OF POSTING

OFF : 90369 76838, Principal : 70196 50345



# ಬ್ರಾಹ್ಮಣ ಸಮಾಜದ ಸರ್ವರ ಅಭಿವೃದ್ಧಿಗೆ ಸದಾ ಸಿದ್ಧ - ಸದಾ ಬದ್ಧ

**ಆತ್ಮೀಯ ವಿಪ್ರ ಬಾಂಧವರೇ,**

'ಸಮಾಜ ಸೇವೆಯೇ ನಿಜವಾದ ಪೂಜೆ' ಎಂಬ ಮಾತಿನಂತೆ ಬದುಕುತ್ತಾ ಬಂದಿದ್ದೇನೆ. ಇಲ್ಲಿಯವರೆಗೂ ನನ್ನಿಂದ ಸಾಧ್ಯವಾದಷ್ಟು ರೀತಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಈಗ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಮೊದಲ ಬಾರಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆಯಿಂದ ಸ್ಪರ್ಧಿಸುತ್ತಿದ್ದೇನೆ. ಈಗಾಗಲೇ ನನ್ನ ನಿರೀಕ್ಷೆಯನ್ನು ಮೀರಿ, ವಿಪ್ರ ಬಾಂಧವರು ನನ್ನನ್ನು ಬೆಂಬಲಿಸುತ್ತಿದ್ದಾರೆ. ಅನೇಕ ಹಿರಿಯ ಚೇತನಗಳು ಹರಸಿದ್ದಾರೆ. ಮಾತೆಯರು ಹಾರೈಸಿದ್ದಾರೆ. ಯುವ ಮನಸುಗಳು ಬದಲಾವಣೆಯನ್ನು ಬಯಸಿದ್ದಾರೆ. ನೀವು ಜಿಲ್ಲಾ ಪ್ರತಿನಿಧಿ ಹಾಗೂ ರಾಜ್ಯಾಧ್ಯಕ್ಷ ಸ್ಥಾನ ಹೀಗೆ ನೀಡುವ ಎರಡು ಮತ, ನನ್ನವಂತವರನ್ನು ಇನ್ನಷ್ಟು ಸಮಾಜಮುಖಿಗಳನ್ನಾಗಿ ಮಾಡುತ್ತವೆ. ಆ ಮೂಲಕ ನಮ್ಮ ಬ್ರಾಹ್ಮಣ ಸಮಾಜದ ಸರ್ವರೂ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ.

ಎನ್.ಆರ್. ನಾಗಭೂಷಣ್ ರಾವ್ ರವರು ದಾವಣಗೆರೆ ಜಿಲ್ಲೆಯ ಖ್ಯಾತ ವಾಣಿಜ್ಯೋದ್ಯಮಿ, ಪಿಕಾಕ್ ನಾಗಭೂಷಣ್ ಎಂದೇ ಖ್ಯಾತರಾಗಿರುವ ಇವರು, ಉದ್ಯಮ ಮತ್ತು ಆಡಳಿತ ಕ್ಷೇತ್ರದಲ್ಲಿ ಶ್ರೀಮಂತ ಅನುಭವ ಹೊಂದಿದ್ದಾರೆ. ಬ್ರಾಹ್ಮಣ ಸಮುದಾಯದ ತ್ರಿಮತಸ್ಥರು ಮತ್ತು ಎಲ್ಲಾ ಒಳಪಂಗಡಗಳೊಂದಿಗೆ ಇವರು ಅತ್ಯಂತ ನಿಕಟ ಬಾಂಧವ್ಯವನ್ನು ಹೊಂದಿದ್ದಾರೆ. ಕಡಲೇಬಾಳು ಹನುಮ, ಮಧ್ವ ಭೀಮ ಟ್ರಸ್ಟ್‌ನ ನಿರ್ದೇಶಕರಾಗಿದ್ದಾರೆ. ಹರಪನಹಳ್ಳಿಯ ನಾಡಿಗೇರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ದೇವಸ್ಥಾನಗಳಿಗೆ ಬ್ರಾಹ್ಮಣ ಸಮಾಜದ ಧಾರ್ಮಿಕ ಕಾರ್ಯಕ್ರಮಗಳಿಗೆ, ಕಳೆದ ಅನೇಕ ವರ್ಷಗಳಿಂದ ಉದಾರ ದೇಣಿಗೆ ನೀಡುತ್ತಿದ್ದಾರೆ. ಬಡವರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಅಗತ್ಯವಿರುವವರಿಗೆ ದಾನ, ಧರ್ಮ ಮಾಡುತ್ತಾ, ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ಸರಳರೂ, ಸಹೃದಯರು ಆದ ನಾಗಭೂಷಣ್‌ರವರು ಜಿಲ್ಲಾ ಪ್ರತಿನಿಧಿಯಾದರೆ ಬ್ರಾಹ್ಮಣ ಸಮಾಜ ಇನ್ನಷ್ಟು ಅಭಿವೃದ್ಧಿಯಾಗುತ್ತದೆ.



ರಘುನಾಥ್ ಎಸ್.

ದಿ. 13-4-2025ರಂದು ನಡೆಯುವ ಮತದಾನದಲ್ಲಿ ದಾವಣಗೆರೆ ಜಿಲ್ಲೆಯಿಂದ ನನ್ನನ್ನು ಮತ್ತು ರಾಜ್ಯಕ್ಕಾಗಿ ಶ್ರೀ ರಘುನಾಥ್ ಅವರಿಗೆ ನಿಮ್ಮ ಅಮೂಲ್ಯ ಮತ ಚಲಾಯಿಸಿರಿ. ಆ ಮೂಲಕ ಸಮಾಜದ ಸೇವೆ ಮಾಡುವ ಅವಕಾಶ ಕೊಡಿ.

ಎನ್. ಆರ್. ನಾಗಭೂಷಣ್ ರಾವ್



ದಾವಣಗೆರೆ ಜಿಲ್ಲಾ ವಿಪ್ರ ಬಾಂಧವರೇ,

ದಿನಾಂಕ 13.04.2025ರಂದು ನಡೆಯುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಸ್. ರಘುನಾಥ್ ಅವರನ್ನು ಮತ್ತು ದಾವಣಗೆರೆ ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಶ್ರೀ ಎನ್.ಆರ್. ನಾಗಭೂಷಣ್ ರಾವ್ ಇವರುಗಳಿಗೆ ನಿಮ್ಮ ಅಮೂಲ್ಯ ಮತವನ್ನು ನೀಡಿ, ಸಮುದಾಯದ ಏಳಿಗೆಗೆ ಅವಕಾಶ ಮಾಡಿ ಕೊಡಿ.

ಎನ್.ಆರ್. ನಾಗಭೂಷಣ್ ರಾವ್ ಅಭಿಮಾನಿ ಬಳಗ

**ರಾಜ್ಯ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿ**

| ಕ್ರಮಸಂಖ್ಯೆ | ಪದನಾಮ | ಭಾವಚಿತ್ರ | ಗುರುತು |
|---|---|---|---|
| 2 | ರಘುನಾಥ್.ಎಸ್ |  | |

**ದಾವಣಗೆರೆ ಜಿಲ್ಲಾ ಪ್ರತಿನಿಧಿ ಸ್ಥಾನದ ಅಭ್ಯರ್ಥಿ**

| ಕ್ರಮಸಂಖ್ಯೆ | ಪದನಾಮ | ಭಾವಚಿತ್ರ | ಗುರುತು |
|---|---|---|---|
| 2 | ನಾಗಭೂಷಣ್ ರಾವ್ ಎನ್.ಆರ್. |  | |

ಮತದಾನದ ದಿನಾಂಕ : 13–04–2025, ಭಾನುವಾರ

ಮತದಾನದ ಕೇಂದ್ರ : ಬ್ರಾಹ್ಮಣ ವಿದ್ಯಾರ್ಥಿ ನಿಲಯ, ಪಿ.ಜೆ. ಬಡಾವಣೆ, ದಾವಣಗೆರೆ – 577002.

ಮತದಾನ ಮಾಡಲು ಮಹಾಸಭಾದ ಗುರುತಿನ ಚೀಟಿ ಅಥವಾ ಸರ್ಕಾರದ ಅಧಿಕೃತ ಗುರುತಿನ ಚೀಟಿ ಕಡ್ಡಾಯ.

# ಭರಮಸಾಗರ ಏಡ್ಸ್ ಜಾಗೃತಿ ಕಾರ್ಯಕ್ರಮ



ಭರಮಸಾಗರ, ಏ.12- ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏಡ್ಸ್ ತಡೆಗಟ್ಟುವಿಕೆಯ ಜಾಗೃತಿ ಮೂಡಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಸಮುದಾಯ ಆರೋಗ್ಯ ಕೇಂದ್ರದ ಆಪ್ತ ಸಮಾಲೋಚಕ ರಮೇಶ್ ಪಿ.ಡಿ. ಉದ್ಘಾಟಿಸಿದರು. ಕಾರ್ಯಕ್ರಮದ ಉದ್ದೇಶ, ಏಡ್ಸ್‌ನ ಇತಿಹಾಸ ಹಾಗೂ ಇದರ ತಡೆಗಟ್ಟುವಿಕೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಬಗ್ಗೆ ವಿವರವಾಗಿ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಸಂಚಾಲಕ ಚಂದ್ರಕುಮಾರ್ ಎಸ್. ಪ್ರಾಸ್ತಾವಿಕ ಭಾಷಣದಲ್ಲಿ, ಏಡ್ಸ್ ಸಂಬಂಧಿಸಿದಂತೆ ಭಾರತವು ಮೂರನೇ ಸ್ಥಾನದಲ್ಲಿ, ಕರ್ನಾಟಕ 9ನೇ ಸ್ಥಾನದಲ್ಲಿ ಮತ್ತು ಚಿತ್ರದುರ್ಗ 26ನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಕೆ.ಎಸ್. ಚಂದ್ರಶೇಖರ್ ಸ್ವಾಗತಿಸಿದರು. ಕು. ನಿರ್ಮಿತಾ ಪ್ರಾರ್ಥಿಸಿದರು. ನಿಖಿತಾ ಕಾರ್ಯಕ್ರಮ ನಿರೂಪಿಸಿದರು. ಡಾ. ಪಿ.ಎಸ್. ಹರೀಶ್ ವಂದಿಸಿದರು.

ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಾದ ಸತ್ಯನಾರಾಯಣ, ವಿಸೂದ್ ಅಹಮದ್ ಕೆ.ಎಚ್., ಡಾ. ಗಿರೀಶ್ ಡಿ.ಆರ್., ಮಮತಾ ಎನ್.ಆರ್., ಶ್ರೀದೇವಿ, ರಿಯಾಜ್, ವಿರೂಪಾಕ್ಷ ಎಂ., ಕಛೇರಿ ಅಧೀಕ್ಷಕ ಚಂದ್ರಶೇಖರಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಅಂಜನಾದ್ರಿಯಲ್ಲಿ ಹನುಮ ಜಯಂತಿ



ಗಂಗಾವತಿ, ಏ. 12 - ಶ್ರೀ ಹನುಮ ಜಯಂತಿಯ ಪ್ರಯುಕ್ತ ಹನುಮ ಜನ್ಮಸ್ಥಳವಾದ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟಕ್ಕೆ ನೊಣವಿನಕೆರೆ ಶ್ರೀ ಕಾಡಸಿದ್ದೇಶ್ವರ ಮಠದ ಪೀಠಾಧಿಪತಿ ಶ್ರೀ ಡಾ. ಕರಿವೃಷಭ ದೇಶಿಕೇಂದ್ರ ಶಿವಯೋಗಿಶ್ವರ ಮಹಾಸ್ವಾಮಿಗಳು ಇಂದು ಭೇಟಿ ನೀಡಿ ಆಂಜನೇಯ ಸ್ವಾಮಿ ಮೂರ್ತಿಗೆ ಅಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿಯನ್ನು ನೆರವೇರಿಸಿದರು.

# 15 ರಂದು ಕಬಡ್ಡಿ ಮತ್ತು ಕುಸ್ತಿ ಕ್ರೀಡೆ : ವಿಶೇಷ ಅಯ್ಕೆ ಶಿಬಿರ

ದಾವಣಗೆರೆ, ಏ. 12- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿಗೆ ಕ್ರೀಡಾ ವಸತಿ ಶಾಲೆ ಅಥವಾ ನಿಲಯಗಳಿಗೆ 8ನೇ ತರಗತಿ, ಪ್ರಥಮ ಪಿ.ಯು.ಸಿ. ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಜಿಲ್ಲಾ ಹಾಗೂ ವಿಭಾಗ ಮಟ್ಟದಲ್ಲಿ ಈಗಾಗಲೇ ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಇದೇ ದಿನಾಂಕ 15 ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶೇಷ ಆಯ್ಕೆ ಶಿಬಿರಆಯೋಜನೆ ಮಾಡಲಾಗಿದೆ. ಆಸಕ್ತರು ಇದೇ ದಿನಾಂಕ 15 ರ ಬೆಳಿಗ್ಗೆ 9.30 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ಕಬಡ್ಡಿ ಮತ್ತು ಕುಸ್ತಿ ಕ್ರೀಡೆಗಳ ಶೇಷ ಆಯ್ಕೆ ಶಿಬಿರದಲ್ಲಿ ಭಾಗವಹಿಸಬಹುದು. ಮಾಹಿತಿಗಾಗಿ 08192-237480ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ದೇವನಗರಿಯಲ್ಲಿ ಸಂಭ್ರಮದ ಹನುಮ ಜಯಂತಿ

## ಹನುಮಂತನ ದೇವಾಲಯಗಳಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ, ಅಭಿಷೇಕ, ಅಲಂಕಾರ





**ನಗರದ ಲೇಬರ್ ಕಾಲೋನಿ ಶ್ರೀ ನಾಟ್ಯ ಗಣಪತಿ ಸೇವಾ ಸಮಿತಿ ಮತ್ತು ಭಕ್ತ ಮಂಡಳಿ ಟ್ರಸ್ಟ್ ವತಿಯಿಂದ ದೇವಸ್ಥಾನ ಆವರಣದಲ್ಲಿ ಪದ್ಮಾಸನ ಹನುಮ ಜಯಂತಿ ಆಚರಿಸಲಾಯಿತು. ತೊಟ್ಟಿಲು ಕಾರ್ಯಕ್ರಮ ನೆರವೇರಿಸಲಾಯಿತು, ನಂತರ ಪಾನಕ ಕೋಸಂಬರಿ ಪ್ರಸಾದ ವಿತರಿಸಲಾಯಿತು, ಟ್ರಸ್ಟ್ ಅಧ್ಯಕ್ಷ ಡಾ. ಸುರೇಶ್ ಬಾಬು, ಕಾರ್ಯದರ್ಶಿ ಡಾ. ಕೆ ಎಸ್ ಗಂಗಾಧರ, ಖಜಂಚಿ ಬಿ ವಿ ರಾಜಶೇಖರ, ಸಾಗರ್ ಪಿ ತೌಡರ್, ಮಾಧುರಿ ವ್ಯಾಸರಾಜ್, ನಂಜುಂಡಮ್ಮ ವೀರಚಾರ್, ಕೆ.ಎಂ. ವೀರೇಶ್, ಗೋಪಿ ಚಂದ್ರು, ಪೈಂಟರ್ ಮೇಸ್ತ್ರಿ ನಾಗರಾಜ್, ಅರ್ಚಕರಾದ ನಾಗಲಿಂಗಯ್ಯ ಹಿರೇಮಠ್, ರಾಜಣ್ಣ ಇತರರು ಈ ಸಂದರ್ಭದಲ್ಲಿದ್ದರು. ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ರತೋತ್ಸವ ಜರುಗಿತು. (ಬಲಚಿತ್ರ)**

ದಾವಣಗೆರೆ, ಏ.12- ನಗರದಲ್ಲಿಂದು ಭಕ್ತರು ಶ್ರದ್ಧಾ ಭಕ್ತಿಯಿಂದ ಹನುಮ ಜಯಂತಿ ಆಚರಿಸಿದರು. ನಗರದಾದ್ಯಂತ ಇರುವ ಹನುಮಂತನ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಅಭಿಷೇಕ ಮತ್ತು ಅಲಂಕಾರಗಳನ್ನು ಮಾಡಲಾಗಿತ್ತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಇಷ್ಟದೇವರಿಗೆ ಪ್ರಾರ್ಥನೆ ಸಲ್ಲಿಸಿದರು.

ನಗರದ ಪ್ರಮುಖ ಹನುಮ ದೇವಾಲಯಗಳಾದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ವಿದ್ಯಾನಗರದ ಆಂಜನೇಯಸ್ವಾಮಿ ದೇವಸ್ಥಾನ, ಪಿ.ಜೆ. ಬಡಾವಣೆಯ ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ವಿವಿಧ ಬಡಾವಣೆಗಳ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು.

ದೇವಸ್ಥಾನಗಳನ್ನು ಹೂವುಗಳು ಮತ್ತು ದೀಪಗಳಿಂದ ಸುಂದರವಾಗಿ ಅಲಂಕರಿಸಲಾಗಿತ್ತು. ಹನುಮಂತನಿಗೆ ಸಿಂಧೂರ ಲೇಪನ ಮಾಡಿ, ತುಳಸಿ ಹಾರ ಹಾಗೂ ವಿವಿಧ ಬಗೆಯ ಹಣ್ಣುಗಳನ್ನು ಅರ್ಪಿಸಲಾಯಿತು.

ಬೆಳಗ್ಗೆಯಿಂದಲೇ ದೇವಾಲಯಗಳಿಗೆ ಭಕ್ತರ ದಂಡು ಹರಿದುಬಂದಿತ್ತು. ಪುರುಷರು, ಮಹಿಳೆಯರು ಮತ್ತು ಮಕ್ಕಳು ಸಾಲುಗಟ್ಟಿ ನಿಂತು ದೇವರ ದರ್ಶನ ಪಡೆದರು. ದೇವಾಲಯಗಳಲ್ಲಿ ರಾಮಾಯಣ ಪಠಣ, ಹನುಮಾನ್ ಚಾಲೀಸಾ ಪಠಣ ಮತ್ತು ಭಕ್ತಿಗೀತೆಗಳ ಗಾಯನ ಕಾರ್ಯಕ್ರಮಗಳು ನಡೆದವು. ಇದರಿಂದಾಗಿ ಇಡೀ ವಾತಾವರಣವು ಭಕ್ತಿಮಯವಾಗಿತ್ತು.

ಕೆಲವು ದೇವಾಲಯಗಳಲ್ಲಿ ಅನ್ನದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಲ್ಲಿ ನೂರಾರು ಭಕ್ತರು ಪಾಲ್ಗೊಂಡು ಪ್ರಸಾದವನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಭಕ್ತರೊಬ್ಬರು, ಹನುಮಂತನು ಶಕ್ತಿ ಮತ್ತು ಭಕ್ತಿಯ ಸಂಕೇತ. ಪ್ರತಿ ವರ್ಷ ನಾವು ಹನುಮ ಜಯಂತಿಯನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತೇವೆ. ಆತನ ಆಶೀರ್ವಾದ ನಮ್ಮೆಲ್ಲರಿಗೂ ಸದಾ ಇರಲಿ ಎಂದು ಪ್ರಾರ್ಥಿಸುತ್ತೇವೆ ಎಂದು ತಮ್ಮಭಕ್ತಿಭಾವವನ್ನು ವ್ಯಕ್ತಪಡಿಸಿದರು.





**ಹಳೇಪೇಟೆ ಈರಣ್ಣನ ತೇರು...** ದಾವಣಗೆರೆ ನಗರದ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಶನಿವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರು ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದರು.



# ರಾಣೇಬೆನ್ನೂರು : ಸಿದ್ದೇಶ್ವರ ದೇವರ ರಥೋತ್ಸವ

ರಾಣೇಬೆನ್ನೂರು, ಏ. 12 - ದವನ ಹುಣ್ಣಿಮೆ ಅಂಗವಾಗಿ ಇಲ್ಲಿನ ಸಿದ್ದೇಶ್ವರ ನಗರದ ಐತಿಹಾಸಿಕ ಸಿದ್ದೇಶ್ವರ ದೇವರ ರಥೋತ್ಸವ ಶನಿವಾರ ಅದ್ದೂರಿಯಾಗಿ ಜರುಗಿತು.

ದೇವಸ್ಥಾನದಿಂದ ಸಂಜೆ 6 ರ ಸುಮಾರು ಹೊರಟ ತೇರು, ಹಳೆ ಪಿ.ಬಿ.ರಸ್ತೆಯಲ್ಲಿ ಹೊರಟು, ಕುರುಬಗೇರಿ ಕ್ರಾಸ್‌ವರೆಗೆ ಬಂದು ಪುನಃ ದೇವಸ್ಥಾನಕ್ಕೆ ಬಂದು ಸೇರಿತು. ದಾರಿಯುದ್ದಕ್ಕೂ ಭಕ್ತಾದಿಗಳು ಶ್ರದ್ಧಾ-ಭಕ್ತಿಯಿಂದ ರಥಕ್ಕೆ ಭವ್ಯ ಸ್ವಾಗತ ಕೋರಿ, ಹಣ್ಣು-ಕಾಯಿ ನೈವೇದ್ಯ ಮಾಡಿಸಿದರು.

# ಸಿದ್ಧಾರೂಢ ಮಠದಲ್ಲಿ ಸಾಮೂಹಿಕ ವಿವಾಹಗಳು

ರಾಣೇಬೆನ್ನೂರು, ಏ. 12- ತಾಲ್ಲೂಕಿನ ಖಂಡೇರಾಯನಹಳ್ಳಿಯ ಶ್ರೀ ಸಿದ್ಧಾರೂಢ ಮಠದಲ್ಲಿ ಆಶ್ರಮದ 31 ನೇ ವಾರ್ಷಿಕೋತ್ಸವ, ಸ್ವಾಮೀಜಿಯವರ ಜಯಂತಿ ಹಾಗೂ ಸಾಮೂಹಿಕ ವಿವಾಹಗಳು ಮೇ 21 ರಂದು ನಡೆಯಲಿದೆ ಎಂದು ಧರ್ಮಾಧಿಕಾರಿ ನಾಗರಾಜಾನಂದ ಸ್ವಾಮಿಗಳು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 6362138704,9900189943.

# ನಿಟ್ಟೂರಿನಲ್ಲಿ ಇಂದು ರಥೋತ್ಸವ

ಮಲೇಬೆನ್ನೂರು ಸಮೀಪದ ನಿಟ್ಟೂರು ಗ್ರಾಮದಲ್ಲಿ ಇಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವ ಜರುಗಲಿದೆ. ಬೆಳಿಗ್ಗೆ 9 ಕ್ಕೆ ದೇವರು ಬೇಟೆ ಆಡುವುದಕ್ಕೆ ಹೋಗುವುದು. ಸಂಜೆ 5 ಕ್ಕೆ ಮುಳ್ಳೋತ್ಸವ, ರಾತ್ರಿ 8 ಕ್ಕೆ ಭೂತ ಸೇವೆ ನಡೆಯಲಿದೆ.

# ವಕ್ಫ್ ತಿದ್ದುಪಡಿ ಕಾಯ್ದೆ ರದ್ದುಪಡಿಸಲು ಪ್ರತಿಭಟನೆ




ದಾವಣಗೆರೆ, ಏ. 12 - ವಕ್ಫ್ ತಿದ್ದುಪಡಿ ಕಾಯ್ದೆಯನ್ನು ರದ್ದುಪಡಿಸುವಂತೆ ಆಗ್ರಹಿಸಿ, ರಾಜ್ಯ ಅಲ್ಪಸಂಖ್ಯಾತರ ಜಾಗೃತಿ ವೇದಿಕೆ ನೇತೃತ್ವದಲ್ಲಿ ದೇವರಾಜ ಅರಸು ಬಡಾವಣೆಯ ಮಸ್ಜಿದ್ ಬಳಿ ಮುಸ್ಲಿಂ ಸಮುದಾಯದವರು ಪ್ರತಿಭಟನೆ ನಡೆಸಿದರು.

ರಾಜ್ಯ ಅಲ್ಪಸಂಖ್ಯಾತರ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಅಬ್ದುಲ್ ಘನಿ ತಾಹೀರ್ ಮಾತನಾಡಿ, ವಕ್ಫ್ ಬಿಲ್ ಅನ್ನು ಈ ದೇಶದ ಮುಸ್ಲಿಂ ಸಮುದಾಯ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಈ ಕಾಯ್ದೆ ಒಪ್ಪಲೇಬೇಕು ಎಂದು ಹೇಳಿದ್ದಾರೆ. ಆದರೆ, ತರಾತುರಿಯಲ್ಲಿ ವಕ್ಫ್ ಕಾಯ್ದೆ ಜಾರಿಗೆ ತರಲಾಗಿದೆ. ಇದರಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಅನ್ಯಾಯ ಮಾಡುವ ಹುನ್ನಾರ ಅಡಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕೆ. ಹನೀಫ್ ಸಾಬ್, ಶಕೀಲ ಅಹಮದ್, ಸಾದತ್ ಅಲಿ, ಗುಬ್ಬಿ ರಹಮತುಲ್ಲಾ ಮತ್ತಿತರರು ಭಾಗವಹಿಸಿದ್ದರು.

# 'ಭೀಮ ಹೆಜ್ಜೆ-100ರ ಸಂಭ್ರಮ' : ನಗರದಲ್ಲಿ ರಥಯಾತ್ರೆಗೆ ಸ್ವಾಗತ





ದಾವಣಗೆರೆ, ಏ.12- ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ದಲಿತರ ಸಬಲೀಕರಣದ ಮಹತ್ವದ ಸಂದೇಶ ನೀಡಲು 100 ವರ್ಷಗಳ ಹಿಂದೆ ಬೆಳಗಾವಿಯ ನಿಪ್ಪಾಣಿಗೆ ಭೇಟಿ ನೀಡಿದ್ದರು. ಈ ಐತಿಹಾಸಿಕ ಘಟನೆಯ ನೆನಪಿಗಾಗಿ ಬಿಜೆಪಿ ಹಮ್ಮಿಕೊಂಡಿರುವ 'ಭೀಮ ಹೆಜ್ಜೆ-100ರ ಸಂಭ್ರಮ' ರಥಯಾತ್ರೆಗೆ ಶನಿವಾರ ನಗರದಲ್ಲಿ ಭವ್ಯ ಸ್ವಾಗತ ದೊರೆಯಿತು.

ಬೆಂಗಳೂರಿನಿಂದ ಹೊರಟ ರಥಯಾತ್ರೆಯು, ಹೆಬ್ಬಾಳದ ಮೂಲಕ ಜಿಲ್ಲೆಗೆ ಆಗಮಿಸಿದಾಗ ಕಾರ್ಯಕರ್ತರು ಡಾ. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು. ಆನಗೋಡಿನಲ್ಲೂ ರಥಕ್ಕೆ ವಿಶೇಷ ಗೌರವ ಸಲ್ಲಿಸಲಾಯಿತು.

ನಂತರ ನಗರದ ಹೊರವಲಯದ ಸರ್ಕ್ಯೂಟ್ ಹೌಸ್‌ನಿಂದ ಬಿಜೆಪಿ ಕಾರ್ಯಕರ್ತರು, ಮುಖಂಡರು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಸಮುದಾಯದ ನಾಯಕರು ಬೈಕ್ ರಾ ್ಯಲಿಯೊಂದಿಗೆ ರಥಯಾತ್ರೆಯನ್ನು ಸ್ವಾಗತಿಸಿದರು. ಹದಡಿ ರಸ್ತೆ ಮೂಲಕ ಸಾಗಿದ ರಥವು ಅಂಬೇಡ್ಕರ್ ವೃತ್ತವನ್ನು ತಲುಪಿದಾಗ ಅಲ್ಲಿನ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಹಾಲಿನ ಅಭಿಷೇಕ ನೆರವೇರಿಸಿ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಅವರು, ಕಾಂಗ್ರೆಸ್ ಪಕ್ಷವು ದೀರ್ಘಕಾಲದಿಂದ ಅಂಬೇಡ್ಕರ್ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆರೋಪಿಸಿದರು.

ಕೋಲಾರದ ಮಾಜಿ ಸಂಸದ ಎಸ್. ಮುನಿಸ್ವಾಮಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರು ಅಂಬೇಡ್ಕರ್ ಅವರ ಜೀವನದ ಪ್ರಮುಖ ಸ್ಥಳಗಳನ್ನು 'ಪಂಚತೀರ್ಥ'ಗಳೆಂದು ಯಾತ್ರಾ ಸ್ಥಳಗಳನ್ನಾಗಿ ಮಾಡಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ ಎಂದಿಗೂ ಯೋಚಿಸಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಹಿಂದ ನಾಯಕ ಎಂದು ಹೇಳಿಕೊಂಡರೂ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಮುಖಂಡ ಆಲೂರು ಲಿಂಗರಾಜ್ ಮಾತನಾಡಿ, "ಸ್ವತಃ ಅಂಬೇಡ್ಕರ್ ಅವರೇ ಕಾಂಗ್ರೆಸ್ಸನ್ನು ವಿರೋಧಿಸಿದ್ದರು. ಹಾಗಾಗಿ ಕಾಂಗ್ರೆಸ್‌ಗೆ ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲ" ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ಎನ್. ಮಾತನಾಡಿ, ರಥಯಾತ್ರೆಯು ಹಾವೇರಿ, ಹುಬ್ಬಳ್ಳಿ, ಧಾರವಾಡ ಮಾರ್ಗವಾಗಿ ಏಪ್ರಿಲ್ 15 ರಂದು ನಿಪ್ಪಾಣಿಯನ್ನು ತಲುಪಲಿದ್ದು, ಅಂದು ಅಲ್ಲಿ ಲಕ್ಷಾಂತರ ಜನರು ಸೇರುವ ಮೂಲಕ ಬೃಹತ್ ಸಮಾವೇಶ ನಡೆಯಲಿದೆ ಎಂದರು.

ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ. ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಪ್ರಮುಖರಾದ ಹನುಮಂತ ನಾಯ್ಕ, ಜಿ.ವಿ. ಗಂಗಾಧರ್, ಮಂಜಾ ನಾಯ್ಕ, ಲೋಕಿಕರೆ ನಾಗರಾಜ್, ಎಸ್.ಟಿ. ವೀರೇಶ್, ಕೆ. ಪ್ರಸನ್ನಕುಮಾರ್, ಐರಣಿ ಅಣ್ಣೇಶ್, ಧನಂಜಯ ಕಡ್ಲೇಬಾಳು, ಎನ್.ಹನುಮಂತ ನಾಯ್ಕ, ರಾಜು ವೀರಣ್ಣ, ಪ್ರವೀಣ್ ಜಾಧವ್, ರವಿಕುಮಾರ್, ವಿಶ್ವಾಸ್ ಸೇರಿದಂತೆ ಅನೇಕರು ರಥಯಾತ್ರೆ ಸಂದರ್ಭದಲ್ಲಿ ಉಪಸ್ಥಿತರಿದ್ದರು.


**WALK IN INTERVIEW**

*Applications are invited for the following post*

- English Teacher BA., B.Ed., (English Major)
- Social Teacher BA., B.Ed., (English Major)
- Hindi Teacher Hindi B.Ed.,
- Mathematics Teacher B.Sc., B.Ed.,
- Physical Education (PE) Teacher BPEd.,

*For more details Contact :*

**80738 45050**

**STAFF WANTED – BAR, RESTAURANT & LIQUOR SHOP**

We are looking for experienced professionals for the following positions:

1. **Computer Billing Staff / Computer Operators**
   - Proficient in billing software
   - Cash handling experience is a must
2. **Stewards and Waiters**
   - Only candidates with prior experience in bar & restaurant setups
3. **Kitchen Supervisors**
   - Strong kitchen management experience preferred
4. **Excise Accounts Assistants / Vendors**
   - Must have hands-on experience in writing and maintaining records for the Excise Department.

Note: Only candidates with prior experience in bar, restaurant, or liquor shop operations will be considered.

**For inquiries contact : 70191 37858, 88673 53321**

SRI LAKSHMI VENKATESHWARA GROUP'S
SLV-i CHIT FUND &INVESTMENTS

SLV-i CHITS PVT. LTD. Security in every step

**JOB VACANCY**

MARKETING STAFF

Requirements :

- Required Accountant
- Experienced in marketing, communications or related fields.
- Knowledge of current marketing trends, techniques, and best practices.
- Ability to develop and implement marketing plans and strategies.
- Excellent writing and communication skills.

APPLY NOW 8553448853

**Get 10 to 30 % DISCOUNTS** on Sunglasses and Spectacles

ALL BRANDS UNDER SINGLE ROOF

**FREE COMPUTERIZED EYE TESTING** By Qualified Optometrist

Saturday We are Open

**SOUTH INDIA OPTICALS**

Near Ram & Co Circle, Beside Bank of Baroda, P.J. Extension, Davanagere 08192-231432 • 08192-462073

**ಬೇಕಾಗಿದ್ದಾರೆ**

ಸಂಜೀವಿನಿ ನೆಟ್‌ವರ್ಕ್ ದಾವಣಗೆರೆ.

- ಯೋಜನಾ ಸಂಯೋಜಕರು - 01 - MSW., MA Socilogy
- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಹಣಕಾಸು ಅಧಿಕಾರಿ - 02 - B.com.,
- ಸಮುದಾಯ ಆರೋಗ್ಯ ಕಾರ್ಯಕರ್ತರು - 08 SSLC

ಎಲ್ಲಾ ತಾಲ್ಲೂಕಿನವರಿಗೂ ಆದ್ಯತೆ

ಮೊ. : 99020 98147, 97386 88610

**ಮಕ್ಕಳ ಉಚಿತ ದಂತ ತಪಾಸಣಾ ಶಿಬಿರ**

ಯಾವಾಗ : ಏಪ್ರಿಲ್ 1 ರಿಂದ ಮೇ 31ರವರೆಗೆ
ಯಾರಿಗೆ : ನವಜಾತ ಶಿಶುವಿನಿಂದ 14 ವರ್ಷದ ಮಕ್ಕಳವರೆಗೆ
ಎಲ್ಲಿ : ಅರಿವು ಡೆಂಟಲ್ ಕ್ಲಿನಿಕ್, ದಾವಣಗೆರೆ.
ಸಮಯ : ಬೆಳಿಗ್ಗೆ : 10.30 ರಿಂದ ಸಂಜೆ 6.30ರವರೆಗೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

**ಅರಿವು ಡೆಂಟಲ್ ಕ್ಲಿನಿಕ್**

ಸಂದೀಪ್ ನರ್ಸಿಂಗ್ ಹೋಮ್ ಹತ್ತಿರ, 7ನೇ ಕ್ರಾಸ್ 7ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.

ಕರೆ ಮಾಡಿ : ಮೊ. : 76762 98958



## ಎಲೆಬೇತೂರಿನಲ್ಲಿ ಹನುಮ ಜಯಂತಿ ಸಂಭ್ರಮ

ದಾವಣಗೆರೆ, ಏ. 12-ಇಲ್ಲಿಗೆ ಸಮೀಪದ ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಹನುಮ ಜಯಂತಿ, ದವನದ ಹುಣ್ಣಿಮೆ ಪ್ರಯುಕ್ತ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬೆಳಿಗ್ಗೆ ಶ್ರೀ ಆಂಜನೇಯ ಸ್ವಾಮಿಗೆ ಕುಂಕುಮಾರ್ಚನೆ, ವಸ್ತ್ರಾಲಂಕಾರ, ಪುಷ್ಪಾರ್ಚನೆ, ತುಳಸಿ ಹಾಗೂ ವೀಳೇದೆಲೆ ಹಾರ, ವಿವಿಧ ಹೂಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಪೂಜೆಯ ನಂತರ ಮಹಾಮಂಗಳಾರತಿಯನ್ನು ನೆರವೇರಿಸಿ, ಪ್ರಸಾದ ವಿತರಿಸಲಾಯಿತು ಪೂಜಾ ಕಾರ್ಯಕ್ರಮವನ್ನು ಸಿದ್ದೇಶಚಾರ್ ನಡೆಸಿಕೊಟ್ಟರು.

## ಅಂಬೇಡ್ಕರ್ ಹೆಸರಿನಲ್ಲಿ ವನ್ಯಧಾಮ: ಮಧ್ಯಪ್ರದೇಶ ಘೋಷಣೆ

ಭೋಪಾಲ್, ಏ. 11 - ಮಧ್ಯಪ್ರದೇಶದ ಸಾಗರ್ ಜಿಲ್ಲೆಯ 258.64 ಚದರ ಕಿಲೋಮೀಟರ್‌ನ ಹೊಸ ವನ್ಯಧಾಮಕ್ಕೆ ಸಂವಿಧಾನ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರಿಡಲಾಗಿದೆ.

ಅಂಬೇಡ್ಕರ್ ಅವರ 134ನೇ ಜನ್ಮದಿನ ಸಮೀಪಿಸುತ್ತಿರುವಂತೆಯೇ, 'ಡಾ. ಭೀಮರಾವ್ ಅಂಬೇಡ್ಕರ್ ಅಭಯಾರಣ್ಯ'ದ ಘೋಷಣೆ ಮಾಡಲಾಗಿದೆ.

ಈ ವನ್ಯಧಾಮವು ವನ್ಯಜೀವಿ ಸಂರಕ್ಷಣೆಯನ್ನು ಬಲಪಡಿಸುವುದರ ಜೊತೆಗೆ ಪರಿಸರ ವ್ಯವಸ್ಥೆಯನ್ನು ಗಟ್ಟಿಗೊಳಿಸಿ, ಸ್ಥಳೀಯರಿಗೆ ಪ್ರವಾಸೋದ್ಯಮ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದ್ದಾರೆ.












KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas